ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಮಾರ್ಚ್ 2017 ಮಾಸ ಪತ್ರಿಕೆ

ಸಂಪುಟ : 39
ಸಂಚಿಕೆ : 6
ಪುಟ : 12
ಬೆಲೆ : ₹ 10/–

## ಹೇವಿಳಂಬಿ ಸಂವತ್ಸರದ ಶುಭಾಶಯಗಳು



ಶಿಕ್ಷಕರ ಸಂಪರ್ಕಕ್ಕೆ ಪೂರ್ಣ ಸಮಯ ಕೊಡಿ
ಕಾರ್ಯಕರ್ತರಿಗೆ ಶ್ರೀ ಮಹೇಂದ್ರಕಪೂರ್ ಕರೆ **3**

ಸಾಮಾಜಿಕ ಕಾರ್ಯಕ್ಕೆ ಮೇಲ್ಪಂಕ್ತಿ
ಶ್ರೀ ಜಯದೇವ್ **11**

A Journal of Karnataka State Secondary Teachers' Association

# ಸಂಪಾದಕೀಯ

ಶಿಕ್ಷಣ ಕುಟುಂಬದ ಎಲ್ಲಾ ಉಪಾಧ್ಯಾಯಿನಿ ಸಹೋದರಿಯರಿಗೆ 'ಮಹಿಳಾ ದಿನ'ದ ಶುಭಾಶಯಗಳು. ನಮ್ಮ ಎಲ್ಲಾ ಶಿಕ್ಷಕ ಮಿತ್ರರಿಗೆ ಹಾಗೂ ವಿದ್ಯಾರ್ಥಿಗಳಿಗೆ ಯುಗಾದಿ ಹಬ್ಬ ಹಾಗೂ ಹೊಸ ವರ್ಷ 'ಹೇವಿಳಂಬಿ ಸಂವತ್ಸರದ ಹಾರ್ದಿಕ ಶುಭ ಕಾಮನೆಗಳು. ಜನವರಿ 1ನೇ ತಾರೀಕಿನಂದೇ ಹೊಸ ವರ್ಷ. ಅಂದು ಅದ್ದೂರಿಯಾಗಿ ಆಚರಿಸಿದ್ದೇವಲ್ಲಾ, ಈಗ ಮತ್ತೆ ಹೊಸವರ್ಷದ ಆಚರಣೆಯೇ ಎಂಬ ಕೌತುಕವೇ ? ಹೌದು. ವ್ಯಾವಹಾರಿಕವಾಗಿ ಜನವರಿ 1ರಂದು ಹೊಸವರ್ಷ ಆಚರಿಸಿರಬಹುದು. ಆದರೆ ಸಾಂಪ್ರದಾಯಿಕವಾಗಿ ನಮಗೆಲ್ಲಾ ಯುಗಾದಿಯ ಆಚರಣೆಯೇ ಹೊಸವರ್ಷ ತಾನೇ. ಯುಗಾದಿಯೊಂದಿಗೆ ವಸಂತನ ಆಗಮನವೂ ಆಗುತ್ತದೆ. ಎಲ್ಲೆಡೆ ಗಿಡಮರಗಳು ಹಸಿರಿನಿಂದ ನಳನಳಿಸುತ್ತಿರುತ್ತದೆ. ಪ್ರಕೃತಿಯಲ್ಲಿ, ಪಶುಪಕ್ಷಿಗಳಲ್ಲಿ ಹೊಸ ಚೈತನ್ಯವನ್ನು ತರುತ್ತದೆ. ಪ್ರ ಕೃತಿಯ ಹೊಸತನದಿಂದ ಪ್ರೇರಿತನಾಗಿ ಮನುಜನೂ ತನ್ನ ಜೀವನದ ಏಕತಾನತೆಯನ್ನು ಹೋಗಲಾಡಿಸಿಕೊಂಡು, ಹೊಸ ಉತ್ಸಾಹದಿಂದ ಜೀವನವನ್ನು ನಡೆಸುವ ಪ್ರೇರಣೆಯನ್ನು ಪಡೆಯುವಂತಾಗಲಿ. ಹೇವಿಳಂಬಿ ಸಂವತ್ಸರವು ವಿಳಂಬವಿಲ್ಲದೆ ನಮ್ಮ ಆಶೋತ್ತರಗಳನ್ನು ಈಡೇರಿಸಲಿ. ಕಳೆದವರ್ಷ ಮಳೆಯಿಲ್ಲದ ಪರಿಣಾಮ ಭೀಕರ ಬರ, ನೀರಿನ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಹೇವಿಳಂಬಿಯು ಸಕಾಲದಲ್ಲಿ ಮಳೆಯನ್ನು ಕರುಣಿಸಿ ನಮ್ಮ ಆತಂಕಗಳನ್ನೆಲ್ಲಾ ದೂರಮಾಡಿ ನೆಮ್ಮದಿ ಹಾಗೂ ಶಾಂತಿಯ ಜೀವನ ನಡೆಸಲು ಅನುವು ಮಾಡಿಕೊಡುತ್ತದೆ ಎಂದು ಆಶಿಸೋಣ. ಬೇವು–ಬೆಲ್ಲ ಆಸ್ವಾದಿಸಿ ಸುಖ–ದುಃಖಗಳನ್ನು ಸಮಚಿತ್ತದಿಂದ ಸ್ವೀಕರಿಸೋಣ.


ಮಾರ್ಚ್ ತಿಂಗಳು ಪರೀಕ್ಷಾ ತಿಂಗಳೂ ಹೌದು. ಈಗಾಗಲೇ ಪಿ.ಯು. ಪರೀಕ್ಷೆಗಳು ಮುಗಿದಿದೆ. ಈ ತಿಂಗಳ 30ರಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಆರಂಭ. ಪರೀಕ್ಷಾರ್ಥಿಗಳಿಗೆಲ್ಲಾ 'ಶಿಕ್ಷಕ ಸಮಾಚಾರ'ದ ಶುಭ ಹಾರೈಕೆಗಳು. ವಿದ್ಯಾರ್ಥಿಗಳು ಆತಂಕವಿಲ್ಲದಂತೆ ಪರೀಕ್ಷೆಯನ್ನು ಬರೆಯುವಂತಾಗಲಿ ಎಂಬ ಆಶಯ ನಮ್ಮದು. ಕಳೆದ ವರ್ಷದಂತೆ ಪ್ರಶ್ನಪತ್ರಿಕೆಯಲ್ಲಾಗಲೀ, ಮೌಲ್ಯಮಾಪನ ಕಾರ್ಯದಲ್ಲಾಗಲೀ ಯಾವುದೇ ಗೊಂದಲವಿಲ್ಲದೆ ವಿದ್ಯಾಥಿಗಳು, ಶಿಕ್ಷಕರು ಪರೀಕ್ಷೆಯನ್ನು ಎದುರಿಸುವಂತೆ ಪರೀಕ್ಷಾ ಮಂಡಲಿಗಳು ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಆಶಿಸೋಣ.

ಜೈನ ಧರ್ಮದ ಸ್ಥಾಪಕ ಮಹಾವೀರ ಹಾಗೂ ಅಂಬೇಡ್ಕರರು ಸದಾಕಾಲ ಸ್ಮರಣೀಯರು. ಈ ಇಬ್ಬರು ಮಹನೀಯರ ಜಯಂತಿ ಏಪ್ರಿಲ್ ತಿಂಗಳಿನಲ್ಲಿ ಬರುತ್ತದೆ. ಮಹಾವೀರರು 'ಅಹಿಂಸಾ ಪರಮೋಧರ್ಮ' ಎಂದು ಬೋಧಿಸುವುದರ ಮೂಲಕ ಜನರು ನೆಮ್ಮದಿಯ ಜೀವನ ನಡೆಸುವ ಮಾರ್ಗವನ್ನು ತೋರಿಸಿದರು. ಮನಸ್ಸಿದ್ದರೆ ಮಾರ್ಗ ಎಂಬುದನ್ನು ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿದವರು ಡಾ|| ಅಂಬೇಡ್ಕರರು. ವಿದ್ಯಾಭ್ಯಾಸಕ್ಕೆ ಆರ್ಥಿಕ ಹಾಗೂ ಸಾಮಾಜಿಕ, ಅಡಚಣೆಗಳು ಸಾಕಷ್ಟಿದ್ದರೂ, ಅದನ್ನೆಲ್ಲಾ ಮೆಟ್ಟಿ ನಿಂತು ಉನ್ನತ ವಿದ್ಯಾಭ್ಯಾಸ ಪಡೆದು ಸಮಾಜ, ದೇಶದ ಏಳಿಗೆಗಾಗಿ ದುಡಿದ ಧೀಮಂತರು ಡಾ|| ಅಂಬೇಡ್ಕರ್. ಅವರ ಸಾಧನೆ, ಆದರ್ಶಗಳು ಎಲ್ಲರಿಗೂ ಪ್ರೇರಣೆ ನೀಡಲಿ ಎಂದು ಆಶಿಸೋಣ.

ನಾಡಿನ ಜನತೆಗೆ ಜೀವನ ದರ್ಶನವನ್ನು, ಗಹನ ತತ್ತ್ವಗಳನ್ನು, ವಿಚಾರಗಳನ್ನು 'ಮಂಕುತಿಮ್ಮನ ಕಗ್ಗ'ದ ಮೂಲಕ ನೀಡಿದವರು ಡಾ|| ಡಿ.ವಿ.ಗುಂಡಪ್ಪನವರು. ಮಾರ್ಚ್ 17ರಂದು ಡಿ.ವಿ.ಜಿ. ಜನಿಸಿದ್ದು. ಅಂತೆಯೇ ಕನ್ನಡದ ಮತ್ತೊಬ್ಬ ವಿಶಿಷ್ಟ ಕವಿ ಪುತಿನರವರು. ಇವರು ಜನಿಸಿದ್ದೂ ಮಾರ್ಚ್ 17ರಂದೇ. ಕನ್ನಡದ ಮೊದಲ ಕವಿ ಎಂ. ಗೋವಿಂದಪೈರವರು ಜನಿಸಿದ್ದು ಮಾರ್ಚ್ 23ರಂದು. ಹಾಗೆಯೇ ಕನ್ನಡದ ವಿಶಿಷ್ಟ ಸಾಹಿತಿಗಳಾದ ಪಿ. ಲಂಕೇಶ್ ಮತ್ತು ವಿದ್ವಾಂಸರಾದ ಮುಳಿಯ ತಿಮ್ಮಪ್ಪಯ್ಯನವರು ಜನಿಸಿದ್ದೂ ಮಾರ್ಚ್ ತಿಂಗಳಿನಲ್ಲಿಯೇ. ಕನ್ನಡ ಸಾಹಿತ್ಯ ಸಾಧಕರುಗಳಾದ ಜಿ.ಪಿ.ರಾಜರತ್ನಂ, ಯಶವಂತ ಚಿತ್ತಾಲರು, ಶಾಂತಿನಾಥ ದೇಸಾಯಿಯವರು ಮರಣಿಸಿದ್ದು ಮಾರ್ಚ್‌ನಲ್ಲಿ. ಈ ಸಂದರ್ಭದಲ್ಲಿ ಈ ಎಲ್ಲಾ ಸಾಧಕರ ಸಾಹಿತ್ಯ ಸಾಧನೆಯನ್ನು ಸ್ಮರಿಸಿ ಗೌರವಿಸೋಣ.

ಸಂಪಾದಕರು

## ಸೂಕ್ತಿ



ಅಹಿಂಸಯ್ಯೆವ ಭೂತಾನಾಂ
ಕಾರ್ಯಂ ಶ್ರೇಯೋನುಶಾಸನಂ ।
ವಾಕ್ಚೈವ ಮಧುರಾ ಶ್ಲಕ್ಷ್ಣಾ
ಪ್ರಯೋಜ್ಯಾ ಧರ್ಮಮಿಚ್ಛತಾ ॥

ಶಿಷ್ಯರಿಗೆ ಉಪದೇಶಿಸುವಾಗ, ಶಿಕ್ಷಣ ಕೊಡುವಾಗ ಶಾರೀರಿಕವಾಗಿ ದಂಡಿಸದೆ ಮಾರ್ಮಿಕ ಮಾತುಗಳಿಂದ ಬೋಧಿಸಬೇಕು. ಅವರ ಶ್ರೇಯೋಭಿವೃದ್ಧಿಗಾಗಿ ಮೇಲಿಂದ ಮೇಲೆ ಎಚ್ಚರಿಸುತ್ತಿರಬೇಕು. ಆದರೂ ಮಿತಿಮೀರಿದಾಗ ಕೋಪಿಯಾಗಿ ತಾಡನ ಮಾಡುವಂತೆ ವರ್ತಿಸಬೇಕು. ಹಾಗಿದ್ದರೂ ಕೇಳದಿರುವಾಗ ಅತಿಯಾದ ವೇದನೆ ಆಗದಂತೆ ದಂಡಿಸಬೇಕು. ಪ್ರೀತಿಸುವದು ಧರ್ಮದ ಪ್ರಧಾನ ಅಂಗವೇ ಆಗಿದೆ.

- ಮನುಸ್ಮೃತಿ

## ಪರಿವಿಡಿ


- ಯುಗಾದಿ 3
- ಶಿಕ್ಷಕರ ಸಂಪರ್ಕಕ್ಕೆ ಪೂರ್ಣ ಸಮಯ ಕೊಡಿ 4
- ಈರನಗೌಡ ಪಾಟೀಲ ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ 4
- ಪಠ್ಯಪುಸ್ತಕ ಪರಿಷ್ಕರಣೆ : ಬಲಿಪಶುಗಳು 6
- ಆದರ್ಶ ಶಿಕ್ಷಕರು– ವೆಂಕಣ್ಣಯ್ಯ 7
- ಸುತ್ತೋಲೆ 8
- ಬೀದರ್–ಸಂಕಲ್ಪ ದಿನಾಚರಣೆ 8
- ಯುಗಾದಿ ಶುಭಾಶಯ 11
- ಸಾಮಾಜಿಕ ಕಾರ್ಯಕ್ಕೆ ಮೇಲ್ಪಂಕ್ತಿ ಶ್ರೀ ಜಯದೇವ್ 11
- ಚಿತ್ರ ಸುದ್ದಿ 12

# ಯುಗಾದಿ

**ಜಿ. ಕೆ. ತಳವಾರ**
**ಬಸವೇಶ್ವರ ಶಿಕ್ಷಕರ ತರಬೇತಿ ಸಂಸ್ಥೆ, ಬಾಗಲಕೋಟೆ-587101**



ಭಾರತ ಹಿಂದೂ ದೇಶ. ಧರ್ಮ ಹಿಂದೂ ಧರ್ಮ, ಈ ಧರ್ಮದಲ್ಲಿ 60 ಹಿಂದೂ ಸಂವತ್ಸರಗಳು ಇದ್ದು ಒಂದೊಂದು ಸಂವತ್ಸರಕ್ಕೂ ಒಂದೊಂದು ಹೆಸರು ಕೊಡಲಾಗಿದ್ದು ಅವು ಅನುಕ್ರಮವಾಗಿ ಒಂದರನಂತರ ಒಂದು ಬರುತ್ತವೆ. ಹೀಗೆ ಒಂದು ಸಂವತ್ಸರದ ಪ್ರಾರಂಭವೇ ಯುಗಾದಿ. ಹಿಂದೂಗಳಿಗೆ ಯುಗಾದಿ ಹೊಸ ವರ್ಷ.

ಯುಗಾದಿ ಎಂದರೆ- ಪ್ರಾರಂಭ, ಬದಲಾವಣೆ, ಹೊಸಹುಟ್ಟು, ಚಿಗುರು, ಹೊಸ ಪ್ರವೇಶ, ಮೊದಲ ಚಂದ್ರ ವೀಕ್ಷಣೆ, ಚೈತ್ರ ಶುಕ್ಲ ಪ್ರತಿ ಪದ, ಬ್ರಹ್ಮಾಂಡ ಹುಟ್ಟಿದ ದಿನ, ಬಣ್ಣ-ಬಣ್ಣದ ರಂಗೋಲಿ, ಹೊಸ ದಿನ, ಹೊಸ ಹುರುಪು, ಮೊದಲ ಹಬ್ಬ ಇವೆಲ್ಲವೂ ಆಗಿದೆ.

ಶಬ್ದಶಃ ಸಂಸ್ಕೃತದಲ್ಲಿ ಯುಗ ಮತ್ತು ಆದಿ ಶಬ್ದಗಳು ಯುಗಾದಿ, ಉಗಾದಿ ಆಗಿದೆ. ಯುಗಾದಿಯು ಮುಖ್ಯವಾಗಿ ಚಾಂದ್ರಮಾನ ಯುಗಾದಿ ಹಾಗೂ ಸೌರಮಾನ ಯುಗಾದಿ ಗಳು. ಚಂದ್ರನ ಚಲನೆಯನ್ನಾಧರಿಸಿ ಚಾಂದ್ರಮಾನ ಯುಗಾದಿ ಹಾಗೂ ಸೂರ್ಯನ ಗತಿಯು ಗಣಿಸಿ ಸೌರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ, ಅದರಲ್ಲೂ ಕರ್ನಾಟಕದಲ್ಲಿ ಚಾಂದ್ರಮಾನ ಯುಗಾದಿಯ ಆಚರಣೆಯಲ್ಲಿದೆ.

**ಸಾಂಪ್ರದಾಯಿಕ ಆಚರಣೆ :** ಯುಗಾದಿಯ ಈ ಸಂದರ್ಭದಲ್ಲಿ ಬೆಳಗಿನ ಜಾವ ಎದ್ದು ಸೂರ್ಯನಿಗೆ ನಮಸ್ಕರಿಸಿ, ಅಭ್ಯಂಗ ಸ್ನಾನಮಾಡಿ, ಹೊಸಬಟ್ಟೆ ಧರಿಸಿ, ಪಂಚಾಂಗದ ಪೂಜೆ ಮಾಡಿ, ಬೇವು ಬೆಲ್ಲ ವಿನಿಮಯ ಮಾಡಿಕೊಳ್ಳುವದು ವಾಡಿಕೆಯಾಗಿದೆ.

### ಯುಗಾದಿಯ ನಿಜ ಅರ್ಥದಲ್ಲಿ ನಾವು ಸಂಭ್ರಮಿಸುತ್ತಿಲ್ಲ

ಹಿಂದೂ ಧರ್ಮದಲ್ಲಿ ದೇವರು-ದೇವತೆಗಳು ಮತ್ತು ಪ್ರಕೃತಿಯನ್ನು ತಳಕು ಹಾಕಲಾಗಿದೆ. ದೇವರು-ದೇವತೆಗಳ ಆರಾಧನೆಯ ಅಂಗವಾಗಿ ಹಬ್ಬ-ಹರಿದಿನಗಳು ಸೃಷ್ಟಿಯಾಗಿವೆ. ಇಲ್ಲಿ ಜಗತ್ತು, ಜೀವ ಮತ್ತು ದೈವ ಈ ಮೂರನ್ನು ಒಳಗೊಂಡು ಹಿಂದೂ ಧರ್ಮದ ಒಂದು ಮಹತ್ವವಾದ, ವಿಶಿಷ್ಟವಾದ ಹಬ್ಬವಾಗಿ ಯುಗಾದಿ ರೂಪಗೊಂಡಿದೆ. ನಮ್ಮ ಸಂಸ್ಕೃತಿಯಲ್ಲಿ ಯುಗಾದಿ ಹೊಸ ವರ್ಷದ ಹಬ್ಬವಾಗಿ, ಪ್ರಕೃತಿ ಮತ್ತು ಜನಜೀವನಗಳ ಅನ್ಯೋನ್ಯತೆಗೆ ಇದೊಂದು ನಿದರ್ಶನ. ಈ ಹಬ್ಬವನ್ನು ಇಂದು ಸಾಂಪ್ರದಾಯಕವಾಗಿ ಆಚರಿಸುತ್ತಾ, ಹಳೆಯ ಕ್ಯಾಲೆಂಡರ್ ಮುಗುಚಿ ಹೊಸ ಕ್ಯಾಲೆಂಡರ್ ಪೂಜಿಸಿ, ಶ್ರವಣ ಮಾಡಿ ಬೇವು-ಬೆಲ್ಲ ಸ್ವೀಕಾರಕ್ಕೆ ಸೀಮಿತ.



ನಮ್ಮ ಹಿರಿಯರು ನಮಗೆ ಈ ಹಬ್ಬವನ್ನು ಕಟ್ಟಿಕೊಟ್ಟ ರೀತಿಯಲ್ಲಿ ಆಚರಿಸಿದ್ದಾದರೆ, ನಮ್ಮ ಹಿರಿಯರ ದೂರ ದೃಷ್ಟಿಯ ಅರಿವು ಉಂಟಾಗಿ ಅವರ ಬಗೆಗೆ, ನಮ್ಮ ಪರಂಪರೆಯ ಬಗೆಗೆ, ಧರ್ಮದ ಬಗೆಗೆ, ಅಭಿಮಾನ ನೂರ್ಮಡಿಯಾಗುವದರಲ್ಲಿ ಸಂದೇಹವಿಲ್ಲ.

ಸಾಮಾನ್ಯವಾಗಿ ಪಾಶ್ಚ್ಯಾತ್ಯರ ಹೊಸ ವರ್ಷ ಜನವರಿ. ಈ ಹೊಸ ವರ್ಷದ ಬಗೆಗೆ ವಿಮರ್ಶಿಸಿದಾಗ ಜನವರಿ ಪ್ರಕೃತಿಯ ಕಳಾಹೀನತೆಯ ಮಾಸ. ಎಲೆಗಳು ಉದುರುವದು, ಕಳಚುವದು, ಪ್ರಕೃತಿ ಬರಡಾಗಿ ಕಳಾಹೀನವಾಗಿ ತೋರುವ ಕಾಲ. ಕಳೆಗುಂದಿದ ವರ್ಷದ ಪ್ರಾರಂಭ ನಮಗೆ ಬೇಕೆ ?

ಕುವೆಂಪು ಕಾವ್ಯದಲ್ಲಿ 'ಮೊನ್ನೆ ಮೊನ್ನೆ ಬೂದಿಯಾದಾ ಹೋಳಿಯಲ್ಲಿ ಕಾಮಾ ಚೈತ್ರ ಗೌರಿ ಹೂತಳಣ್ಣಾ ನೆನೆದು ಶಿವನ ನಾಮಾ ಮಾಧವನಾ ರಾಸಲೀಲೆಗಿದೇ ಋತುವು ಹದವು ಸುಂಟ್ರುಗಾಳಿ, ಅಡ್ಡ ಮಳೆ ತೆರೆದಿತಕ್ಕಾ ಕದವು. ಚಿಗುರು ಹಸಿತು, ಬಲಿತು ಹಳಿತು ಎಲೆ ಎಲೆ ಎಲೆ ಉದುರಿತು ಫಲ ಸಿಡಿದು ಬೀಜ ಬೀಜ ಅದು ಎಲ್ಲೋ ಚದುರಿತು' ಎನ್ನವಂತೆ ಚೈತ್ರ ಮಾಸದಲ್ಲಿ ವಸಂತ ಋತುವಿನ ಆಗಮನದ ಜೊತೆಗೆ ಚಿಗುರು ಮೂಡಿ, ಗಿಡ ಮರಗಳು ನಳನಳಿಸಿ, ಪ್ರಕೃತಿ ಭೂಮಿಯನ್ನು ಅಲಂಕರಿಸಿದಂತಾಗಿ ಪ್ರಕೃತಿ ಬದಲಾವಣೆಯಾಗುತ್ತದೆ. ಈ ಬದಲಾವಣೆ ಅನುಸರಿಸಿ ಕ್ಯಾಲೆಂಡರ್ ಮಾಡಲಾಗುತ್ತದೆ. ಕ್ಯಾಲೆಂಡರ್ ಅನುಸರಿಸಿ ಪ್ರಕೃತಿ ಬದಲಾಗುವುದಿಲ್ಲ. ಆದರೆ ಕ್ಯಾಲೆಂಡರ್ ಬದಲಾಯಿಸಿ ಸಂಭ್ರಮಿಸುವ ನಾವು ಪ್ರಕೃತಿ ಬದಲಾವಣೆಗಳನ್ನು ಗಮನಿಸಿ ಸಂಭ್ರಮಿಸುವುದಿಲ್ಲ, ಇದನ್ನು ಅರಿತು ಆಚರಿಸುವಂತಾಗಬೇಕು, ಸಂಭ್ರಮಿಸುವಂತಾಗಬೇಕು.

### ಯುಗಾದಿಯನ್ನು ಕವಿಗಳು ಕಂಡಂತೆ

ವರ್ಷಾದಿಯ ತಿಳಿನಗೆ ಮೊಗಲೆ, ಶುಭ ಯುಗಾದಿಯ ಕರೆವ ಸೊಗಲೆ ಋತುಗಳ ಗಣನಾಯಕ ಶರಣೆನ್ನುವೆನ್ನದೆ, ಶುಭದಾಯಕ ಎನ್ನುವ ಕೆ.ಎಸ್.ನಿಸಾರ್ ಅಹ್ಮದ್ ಶರಣು ಮಾಡುತ ಬರಮಾಡಿಕೊಳ್ಳುವ ಯುಗಾದಿಗೆ, ಮಲ್ಲಿಗೆಯ ಕವಿ ಕೆ.ಎಸ್.ನರಸಿಂಹಸ್ವಾಮಿ, ಮಾವು ನಾವು, ಬೇವು ನಾವು, ನೋವು ನಲಿವು ನಮ್ಮವು, ಹೂವು ನಾವು, ಹಸಿರ ನಾವು, ಬೇವು-ಬೆಲ್ಲ ನಮ್ಮವು ಎಂದು ಸಂದೇಶ ನೀಡುತ್ತಾರೆ.

ಕುವೆಂಪುರವರು ಮಾವಿನ ಬೇವಿನ ತೋರಣ ಕಟ್ಟು, ಬೇವು ಬೆಲ್ಲಗಳನೊಟ್ಟಿಗೆ ಕುಟ್ಟು ! ಜೀವನವೆಲ್ಲ ಬೇವೂ ಬೆಲ್ಲ, ಎರಡೂ ಸವಿವುದೇ ಕಲಿಮಲ್ಲ ! ಎಂದು ಯುಗಾದಿಯ ಕುರಿತು

ಪುಟ 10 ಕ್ಕೆ ➤

# ಶಿಕ್ಷಕರ ಸಂಪರ್ಕಕ್ಕೆ ಪೂರ್ಣ ಸಮಯ ಕೊಡಿ
## ಕಾರ್ಯಕರ್ತರಿಗೆ ಶ್ರೀ ಮಹೇಂದ್ರಕಪೂರ್ ಕರೆ

ಶಿಕ್ಷಕ ಸಂಘದ ಬೆನ್ನೆಲುಬೇ ಸದಸ್ಯತ್ವ, ಆದ್ದರಿಂದ ಶಿಕ್ಷಕ ಸಂಘದ ಕಾರ್ಯಕರ್ತರು ಪ್ರತಿವರ್ಷವೂ ಸಂಘಕ್ಕೆ ಶಿಕ್ಷಕರ ಸದಸ್ಯತ್ವವನ್ನು ಮಾಡಿಸುವ ಬಗ್ಗೆ ಗಮನಹರಿಸಬೇಕು, ಆ ಮೂಲಕ ಶಿಕ್ಷಕರ ಸಂಪರ್ಕದಲ್ಲಿ ನಿರಂತರವಾಗಿ ಇರಬೇಕು, ಅದಕ್ಕಾಗಿ ತಮ್ಮ ಪೂರ್ಣ ಸಮಯವನ್ನು ಕೊಟ್ಟು ಶಿಕ್ಷಕರ ಸಂಪರ್ಕ, ಅಭಿಯಾನಗಳನ್ನು ಕೈಗೊಳ್ಳಬೇಕು. ನಿರಂತರ ಪ್ರವಾಸ ಮಾಡಬೇಕು ಎಂದು ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಂಡಳಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಮಹೇಂದ್ರ ಕಪೂರ್‌ರವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರಿಗೆ ಕರೆ ನೀಡಿದರು. ದಿನಾಂಕ 26.2.2017 ರಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ಸಮಾರೋಪದ ನುಡಿಗಳನ್ನಾಡುತ್ತ ಶ್ರೀ ಕಪೂರ್ ಅವರು ಶಿಕ್ಷಕ ಸಂಘದಲ್ಲಿ ಶಿಕ್ಷಕಿಯರು ಹೆಚ್ಚು ಕ್ರಿಯಾಶೀಲರಾಗಬೇಕೆಂದು ನುಡಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರಾಗಿ 2019ರವರೆಗೆ ನಿಯುಕ್ತರಾದ ವಿಧಾನ ಪರಿಷತ್ ಸದಸ್ಯ ಶ್ರೀ ಅರುಣಶಹಾಪುರ ಹಾಗೂ ಎ.ಬಿ.ಆರ್.ಎಸ್.ಎಂ.ನ ರಾಷ್ಟ್ರೀಯ ಕಾರ್ಯಕಾರಿಣಿ ಮಹಿಳಾ ಸದಸ್ಯರಾಗಿ ಆಯ್ಕೆಯಾದ ಶ್ರೀಮತಿ ಮಮತಾರವರನ್ನು ಸಭೆ ಅಭಿನಂದಿಸಿತು.

26.2.2017 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕಾರಿಣಿಯ ಜೊತೆಗೇ ಕರ್ನಾಟಕ ರಾಜ್ಯಮಹಾವಿದ್ಯಾಲಯಗಳ ಒಕ್ಕೂಟದ ಸಭೆಯೂ ನಡೆದುದು ವಿಶೇಷ. ಸಭೆಯ ಆರಂಭದಲ್ಲಿ ಜಿಲ್ಲೆಗಳ ಪ್ರತಿನಿಧಿಗಳ ಪರಿಚಯದೊಂದಿಗೆ ಜಿಲ್ಲೆಗಳು ನಡೆಸಿದ ಕಾರ್ಯಚಟುವಟಿಕೆಗಳ ವರದಿಯನ್ನು ನೀಡಲಾಯಿತು. ಕರ್ನಾಟಕ ರಾಜ್ಯ ಮಹಾವಿದ್ಯಾಲಯದ ಅಧ್ಯಕ್ಷರಾದ ಪ್ರೊ॥ ರಘು ಅಕ್ಮಂಚಿಯವರು ಸಂಘದ ಗುರಿ, ಉದ್ದೇಶಗಳ ಪರಿಚಯ ಮಾಡಿಕೊಟ್ಟರು.

ಇತ್ತೀಚೆಗೆ ನಡೆದ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಕುರಿತು ಕ.ರಾ.ಮಾ.ಶಿ ಸಂಘದ ಅಧ್ಯಕ್ಷರಾದ ಶ್ರೀ ಶಿವಾನಂದ ಸಿಂಧನಕೇರ ಅವರು ಮಾಹಿತಿ ನೀಡಿದರು. ಶ್ರೀ ವೃಷಭೇಂದ್ರ ಸ್ವಾಮಿಯವರು ಚುನಾವಣೆ ನಡೆದ ಬಗ್ಗೆ ವಿಶ್ಲೇಷಣೆ ನೀಡಿದರು. ನಂತರ ಮಾತನಾಡಿದ ಶ್ರೀಯುತ ಅರುಣಶಹಾಪುರರು ಚುನಾವಣೆಯಲ್ಲಿ ಸೋಲು ಗೆಲುವು ಸಾಮಾನ್ಯ, ಆದರೆ ಶಿಕ್ಷಕ ಸಂಘದ ಚಟುವಟಿಕೆಗಳು ನಿರಂತರ, ಸಂಘದ ಕೆಲಸ ಮುಂದುವರೆಸಲು ಮುಂದೆಯೂ ಎಲ್ಲಾ ಶಿಕ್ಷಕರೂ ಒಂದಾಗಿರುವಂತೆ, ತುಮಕೂರಿನಲ್ಲಿ ಸಮಾವೇಶವನ್ನು ಏರ್ಪಡಿಸುವಂತೆ ಸಲಹೆ ನೀಡಿದರು.

ನಂತರದ ಅವಧಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಚಿದಾನಂದ ಪಾಟೀಲರು ಮಾರ್ಚ್‌ನಲ್ಲಿ ಬರುವ ಯುಗಾದಿ ಹಬ್ಬವನ್ನು ಹೊಸ ವರ್ಷವಾಗಿ ಆಚರಿಸಬೇಕು. ಯುಗಾದಿ ಹೊಸವರ್ಷವೆಂಬ ಜಾಗೃತಿಯನ್ನು ಶಿಕ್ಷಕರು, ವಿದ್ಯಾರ್ಥಿಗಳು, ಹಾಗೂ ಪೋಷಕರಲ್ಲಿ ಮೂಡಿಸಬೇಕು. ಅದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಸಲಹೆ ನೀಡಿದರು. ಇದರೊಂದಿಗೆ ಭಾಗವಹಿಸಿದ್ದ ಸದಸ್ಯರು ಫೇಸ್‌ಬುಕ್, ವಾಟ್ಸ್ಯಾಪ್‌ಗಳಲ್ಲಿ ಸಂದೇಶ ಕಳುಹಿಸುವುದು, ಶಾಲೆಗಳಿಗೆ ಶುಭ ಸಂದೇಶ ಕಳುಹಿಸುವುದು, ಕರಪತ್ರ ಹಂಚುವುದು, ಬ್ಯಾನರ್ ಹಾಕುವುದು ಹಾಗೂ ತರಗತಿಗಳಲ್ಲಿ ಈ ಬಗ್ಗೆ ವಿದ್ಯಾರ್ಥಿಗಳಿಗೆ ಮನದಟ್ಟುಮಾಡಿ ಅಂಚೆ ಕಾರ್ಡಿನಲ್ಲಿ ಶುಭಾಶಯ ಸಂದೇಶ ಬರೆದು ಕಳುಹಿಸುವಂತೆ ಪ್ರೇರೇಪಿಸಬೇಕು ಎಂಬ ಸಲಹೆಗಳನ್ನು ನೀಡಿದರು.

ಶಿಕ್ಷಕರಿಗೆ ನೀಡುತ್ತಿರುವ ವಿಶೇಷ ವೇತನವು ತತ್ಸಮಾನ ಹುದ್ದೆಯವರಿಗೆ ಕೈತಪ್ಪಿದೆ. ಈ ಬಗ್ಗೆ ಸಂಘ ಪ್ರಯತ್ನಿಸಿ ಕೊನೆಯ ಹಂತ ತಲುಪುತ್ತಿದೆ. ಈಗ ನಮ್ಮ ಪ್ರಯತ್ನ ಮುಂದುವರೆಯಬೇಕು ಎಂದು ತಿಳಿಸಲಾಯಿತು. ಅದಕ್ಕಾಗಿ 28.2.17ರಂದು ದೈಹಿಕ ಶಿಕ್ಷಕ ಸಂಘ ನಡೆಸುವ ಕಾರ್ಯಾಗಾರದಲ್ಲಿ ನಮ್ಮ ಸಂಘದ ಪ್ರತಿನಿಧಿಗಳು ಭಾಗವಹಿಸಿ ನಾವು ಮಾಡಿರುವ ಪ್ರಯತ್ನಗಳ ಬಗ್ಗೆ ತಿಳಿಸುವಂತೆ ಸೂಚಿಸಲಾಯಿತು. ಸಂಘದ ಪ್ರಯತ್ನದ ಬಗ್ಗೆ ಎಲ್ಲಾ ಶಿಕ್ಷಕರಿಗೆ ಪತ್ರ ಬರೆದು ತಿಳಿಸಬೇಕೆಂದು ನಿರ್ಧರಿಸಲಾಯಿತು. 2008ರ ನಂತರ ನೇಮಕಾತಿ ಆದವರಿಗೆ ವಿಶೇಷ ವೇತನ ನೀಡುತ್ತಿರಲಿಲ್ಲ. ಇವರಿಗೂ ಈ ಸೌಲಭ್ಯ ನೀಡುವಂತೆ ಕೋರ್ಟ್ ಆದೇಶ ನೀಡಿದೆ. ಈ ಆದೇಶದೊಂದಿಗೆ 2008 ರ ನಂತರ ನೇಮಕಗೊಂಡವರಿಗೂ ವಿಶೇಷ ವೇತನ ನೀಡುವಂತೆ ಬಿ.ಇ.ಓ, ಡಿಡಿಪಿಐ, ಶಿಕ್ಷಣ ಸಚಿವರಿಗೆ ಮನವಿ ಮಾಡುವಂತೆ ತೀರ್ಮಾನಿಸಲಾಯಿತು.

ಮುಂದಿನ ಶೈಕ್ಷಣಿಕ ವರ್ಷದಿಂದ ಕನಿಷ್ಠಕಲಿಕಾ ಅಂಶ ಜಾರಿಗೆ ಬರುವುದರಿಂದ ಈಗಿರುವ ಸಿಸಿಇ ಸಹಜವಾಗಿ ಪಕ್ಕಕ್ಕೆ ಹೋಗುತ್ತದೆ. ಈ ಬಗ್ಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳ ಕಾರ್ಯಕ್ರಮಗಳನ್ನು ಏರ್ಪಡಿಸುವ ಬಗ್ಗೆ ಸೂಚನೆ ನೀಡಲಾಯಿತು.

ರಾಜ್ಯಾಧ್ಯಕ್ಷರಾದ ಶ್ರೀಯುತ ಶಿವಾನಂದ ಸಿಂಧನಕೇರ ಅವರು

ಪುಟ 5 ಕ್ಕೆ ➤

➢ ಪುಟ 4 ರಿಂದ..... ಶಿಕ್ಷಕರ ಸಂಪರ್ಕ...

'ಶಿಕ್ಷಕ್ ಸಮ್ಮಾನ್' ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಎ.ಬಿ.ಆರ್.ಎಸ್.ಎಂ ರಾಷ್ಟ್ರಮಟ್ಟದಲ್ಲಿ ಮೂವರು ಸಾಧಕರನ್ನು ಪ್ರತಿ ವರ್ಷ ಗುರುತಿಸಿ ಸನ್ಮಾನಿಸುತ್ತದೆ. ಒಂದು ಲಕ್ಷ ರೂ ನಗದು, ಬೆಳ್ಳಿಪದಕ, ಪ್ರಶಂಸಾ ಪತ್ರಗಳನ್ನು ಸನ್ಮಾನ ಒಳಗೊಂಡಿರುತ್ತದೆ. ಈ ವರ್ಷ ಶಿಕ್ಷಕ ಸಮ್ಮಾನ್ ಕರ್ನಾಟಕದ ಬೆಂಗಳೂರಿನಲ್ಲಿ ಜುಲೈ ತಿಂಗಳಿನಲ್ಲಿ ನಡೆಯುತ್ತದೆ. ಶಿಕ್ಷಕರಿಂದ ಸಂಗ್ರಹವಾದ ಹಣದಿಂದ ನಡೆಯುವ ಕಾರ್ಯಕ್ರಮ ಇದು. ಪ್ರತಿ ಶಿಕ್ಷಕರಿಂದ 101ರೂ ಗಳನ್ನು ಮಾತ್ರ ಸಂಗ್ರಹಿಸಬೇಕು ಎಂಬ ಮಾಹಿತಿಯೊಂದಿಗೆ ಪ್ರತಿ ಜಿಲ್ಲೆಗಳಿಂದ ನಿಧಿ ಸಂಗ್ರಹದ ಗುರಿಯನ್ನು ನಿಗದಿಪಡಿಸಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ 50 ವರ್ಷಗಳನ್ನು ಪೂರೈಸುತ್ತಿದ್ದು ಈ ವಿಶೇಷ ಸಂದರ್ಭಕ್ಕಾಗಿ ರಾಜ್ಯಮಟ್ಟದ ವಿಶೇಷ ಸಮಾರಂಭವನ್ನು ಆಯೋಜಿಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಬೇಸಿಗೆ ರಜೆಯಲ್ಲಿ ಸಂಘಟನೆಯ ದೃಷ್ಟಿಯಿಂದ ಕಾರ್ಯಕರ್ತರು ಎಂಟು ದಿನಗಳ ಸಮಯವನ್ನು ಬೇರೆ ಜಿಲ್ಲೆಗಳ ಪ್ರವಾಸಕ್ಕಾಗಿ ವಿನಿಯೋಗಿಸುವಂತೆ ಸಲಹೆ ನೀಡಿದರು. ಮಹಿಳಾ ಕಾರ್ಯಕರ್ತರೂ ಈ ಪ್ರವಾಸದಲ್ಲಿ ಭಾಗಿಗಳಾಗಲಿದ್ದಾರೆ ಎಂದ ಅವರು ಕಾರ್ಯಕರ್ತರು ಪ್ರವಾಸದ ವಿವರವನ್ನು ನೀಡುವಂತೆ ಸೂಚಿಸಿದರು.

ಶಿಕ್ಷಕ ಸಮಾಚಾರ ನಮ್ಮೆಲ್ಲರ ಪತ್ರಿಕೆ. ಚಂದಾದಾರರಾಗುವ ಮೂಲಕ ಮತ್ತು ಚಂದಾವನ್ನು ಸಕಾಲದಲ್ಲಿ ನವೀಕರಿಸುವ ಮೂಲಕ ಪತ್ರಿಕೆಯ ಆರ್ಥಿಕತೆಯನ್ನು ಉತ್ತಮಗೊಳಿಸಲು ನೆರವಾಗಬೇಕು. ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳ ವರದಿ ಹಾಗೂ ಚಿತ್ರಗಳನ್ನು ಶಿಕ್ಷಕ ಸಮಾಚಾರಕ್ಕೆ ಕಳುಹಿಸಬೇಕು. ಇದರಿಂದ ನಮ್ಮೆಲ್ಲ ಕಾರ್ಯಕ್ರಮಗಳ ಪರಿಚಯ ಎಲ್ಲರಿಗೂ ಆಗಲಿದೆ. ಸಂಘದ ಚಟುವಟಿಕೆಗಳ ಬೆಳವಣಿಗೆಗೆ ನೆರವಾಗಲಿದೆ. ಜೊತೆಗೆ ವೈಚಾರಿಕ ಲೇಖನಗಳ, ಸಾಹಿತ್ಯಕ ಬರವಣಿಗೆಗಳನ್ನು ಕಳುಹಿಸಬೇಕು. ಪತ್ರಿಕೆಯ ಉತ್ತಮಿಕೆಗಾಗಿ ಒಳ್ಳೆಯ ಸಲಹೆಗಳನ್ನು ನೀಡುವಂತೆ ಶಿಕ್ಷಕ ಸಮಾಚಾರದ ಸಹಸಂಪಾದಕರಾದ ನಾಗರಾಜ್ ಮನವಿ ಮಾಡಿದರು.

ಕ.ರಾ.ಮಾ.ಶಿ. ಸಂಘದ ಮಾರ್ಗದರ್ಶಕರಾದ ಪ್ರೊ॥ ಬಾಲಕೃಷ್ಣಭಟ್‌ರವರು ಮಾತನಾಡಿ ಶಿಕ್ಷಕ ಸಂಘದ ಸಾಧನೆಗಳು ಬಹಳ. ಶಿಕ್ಷಕ ಸಮಾಚಾರದ ಏಳಿಗೆಗಾಗಿ ಹಾಗೂ ಸಂಘದ ಇತರ ಚಟುವಟಿಕೆಗಳಲ್ಲಿ ನಾವು ಎಷ್ಟು ಕಾಣಿಕೆ ನೀಡಿದ್ದೇವೆ. ನಮ್ಮ ಪಾತ್ರ ಎಷ್ಟು ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಗುರುವಂದನೆ, ಸಂಕಲ್ಪದಿನ, ಯುಗಾದಿ ಹೊಸವರ್ಷಾಚರಣೆ ಈ 3 ಕನಿಷ್ಠ ಕಾರ್ಯಕ್ರಮಗಳ ಆಚರಣೆಯಲ್ಲಿ ಪ್ರಾಮಾಣಿಕವಾಗಿ ಪಾಲ್ಗೊಳ್ಳುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು.

ಮಧ್ಯಾಹ್ನದ ಅವಧಿ ವಿಧಾನ ಪರಿಷತ್ ಸದಸ್ಯ ಶ್ರೀ ಅರುಣ ಶಹಾಪೂರರೊಂದಿಗೆ ಸಂವಾದ. ಇದರಲ್ಲಿ ಕಾರ್ಯಕರ್ತರು ಶಿಕ್ಷಣ ಕ್ಷೇತ್ರದ ಹಲವಾರು ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಪಠ್ಯಪುಸ್ತಕ ಪರಿಷ್ಕರಣೆ, ಮುಖ್ಯಶಿಕ್ಷಕರಿಗೆ Exgratia ನೀಡದಿರುವುದು, ಬಿ ವೃಂದದ ಅಧಿಕಾರಿಗಳ ಬಡ್ತಿ, KEA ಗೆ ತಿದ್ದುಪಡಿ ತಂದು ಶಿಕ್ಷಕರು, ಶಿಕ್ಷಕ ಪ್ರತಿನಿಧಿಗಳು, ಶಿಕ್ಷಕರ ದಮನ ಮಾಡಲು ಹೊರಟಿರುವ ಸರ್ಕಾರದ ಬಗ್ಗೆ, ಹೀಗೆ ಎಲ್ಲ ವಿಷಯಗಳ ಕುರಿತು ಶಿಕ್ಷಕರಿಗೆ ಸವಿವರ ತಿಳುವಳಿಕೆ ನೀಡಬೇಕು. ಹೋರಾಟದ ಅವಶ್ಯಕತೆಯೂ ಬರಬಹುದು ಎಂದು ನಿರ್ಧರಿಸಲಾಯಿತು.

ಸಂಘದ ಕಾರ್ಯದರ್ಶಿಗಳಾದ ಶ್ರೀ ಸಂದೀಪ್‌ಬೂದಿಹಾಳ್ ಎಲ್ಲರನ್ನೂ ಸ್ವಾಗತಿಸಿ ವಂದಿಸಿದರು. •

# ಈರನಗೌಡ ಪಾಟೀಲ ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ



ರಾಜ್ಯ ಸರಕಾರದ ಪದವಿ ಪೂರ್ವ ಶಿಕ್ಷಣ ಇಲಾಖೆ ಕೊಡ ಮಾಡುವ ರಾಜ್ಯದ ಅತ್ಯುತ್ತಮ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಪ್ರಶಸ್ತಿಗೆ ಎಮ್.ಎಸ್.ಇರಾಣಿ ಪದವಿ ಪೂರ್ವ ಕಾಲೇಜಿನ ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿ ಹಾಗೂ ಇತಿಹಾಸ ಉಪನ್ಯಾಸಕರಾಗಿರುವ ಈರನಗೌಡ ಪಾಟೀಲ ಪಾತ್ರರಾಗಿದ್ದಾರೆ. ಅವರಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ನಿರ್ದೇಶನಾಲಯ ಬೆಂಗಳೂರಿನ ಶಿವಾನಂದ ಸರ್ಕಲ್‌ನ ಗಾಂಧಿಭವನದಲ್ಲಿ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಉತ್ತಮ ಎನ್‌ಎಸ್‌ಎಸ್ ಯೋಜನಾಧಿಕಾರಿ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಇವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಾಧ್ಯಮ ಪ್ರಕೋಷ್ಠದ ರಾಜ್ಯ ಸಂಚಾಲಕರಾಗಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಭಿನಂದನೆಗಳು.

# ಪಠ್ಯಪುಸ್ತಕ ಪರಿಷ್ಕರಣೆ : ಬಲಿಪಶುಗಳು

■ ಚಿಕ್ಕಸ್ವಾಮಿ
ಅಧ್ಯಕ್ಷರು, ಕ.ರಾ.ಮಾ.ಶಿ.ಸಂ. ಜಿಲ್ಲಾ ಘಟಕ, ಮಂಡ್ಯ.

ಬದಲಾವಣೆ ಎಂಬುದು ಸಹಜ ಪ್ರಕ್ರಿಯೆ. ಎಲ್ಲಾ ಕ್ಷೇತ್ರಗಳಲ್ಲೂ ಯಾವುದೇ ಸಂಗತಿ, ವಿಚಾರಗಳು ನಿಂತ ನೀರಾಗಬಾರದು. ಹೆಚ್ಚು ದಿನ ಒಂದೇ ಕಡೆ ನಿಂತ ನೀರು ಕೊಳೆತು ಅನಾರೋಗ್ಯವನ್ನುಂಟು ಮಾಡುವಂತೆ ವಿಚಾರಗಳು ನಿಂತ ನೀರಾಗದಂತೆ ನಿರಂತರವಾಗಿ ಪ್ರವಹಿಸಬೇಕಾದ್ದು ಸಮಾಜದ ಚಲನೆಯ ದೃಷ್ಟಿಯಿಂದ ಸೂಕ್ತವೂ ಸಮಂಜಸವೂ ಹೌದು.

ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಇಲಾಖೆಯಲ್ಲಿ ಪಠ್ಯಪುಸ್ತಕ ಪರಿಷ್ಕರಣೆ ಬಗ್ಗೆ ಬಹಳಷ್ಟು ಚರ್ಚೆಗಳು ನಡೆಯುತ್ತಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಪಠ್ಯಪುಸ್ತಕಗಳು ಪಠ್ಯಕ್ರಮದ ಆಧಾರದ ಮೇಲೆ ರಚಿತಗೊಂಡಂತಹವು. ಅವು ಸಾಮಾಜಿಕ, ನೈತಿಕ, ವೈಚಾರಿಕತೆ, ವೈಜ್ಞಾನಿಕ ಹಾಗೂ ಸಂವಿಧಾನಿಕ ತಳಹದಿಯ ಮೇಲೆ ರೂಪುಗೊಂಡಂತಹವು. ಅವುಗಳ ರಚನೆಗೆ ಅನುಭವಿ, ಪ್ರಾಜ್ಞ, ವಿದ್ವಾಂಸರು ಹಾಗೂ ತರಗತಿಗಳಲ್ಲಿ ಬೋಧಿಸಿದ ಅನುಭವವಿರುವ ಶಿಕ್ಷಕರ ತಂಡಗಳನ್ನು ನೇಮಿಸಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಹಾಗೂ 2009ರ ತಳಹದಿಯ ಆಧಾರದ ಮೇಲೆ ರಚನೆಗೊಂಡಂತ ಪಠ್ಯಪುಸ್ತಕಗಳಿವೆ. ಈ ಪಠ್ಯಪುಸ್ತಕಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯಗಳು ತರಗತಿ ಮತ್ತು ವಯೋಮಾನಕ್ಕನುಗುಣವಾಗಿ ರೂಪಿತಗೊಂಡ ಕಲಿಕಾ ಸಾಮರ್ಥ್ಯಗಳು, ವಿದ್ಯಾರ್ಥಿಗಳಿಗೆ ಕಟ್ಟಿಕೊಡುವ ಜ್ಞಾನ ಅನುಭವಗಳು ಸರಳೀಕೃತವಾಗಿ ರೂಪಿತಗೊಂಡು ಮುಂದಿನ ತರಗತಿಗಳಿಗೆ ಜ್ಞಾನದ, ಕಲಿಕಾ ಅನುಭವಗಳು ಶಾಲೆಯ ಹೊರಗಿನ ಅನುಭವಗಳಿಗೆ ಹೊಂದಿ ಕೊಳ್ಳುವಂತೆ ರೂಪಿಸಿ ಅವುಗಳನ್ನು ಅನೇಕ ಹಂತಗಳಲ್ಲಿ ಪರೀಕ್ಷಿಸಿ ಪ್ರಾಯೋಗಿಕವಾಗಿ ನೋಡಿ ಸರಿಯಾಗಿದೆ ಎಂದ ಮೇಲೆ ಮಾತ್ರ ಅಂತಿಮ ರೂಪನೀಡಿ ಮುದ್ರಿಸಿ ವಿದ್ಯಾರ್ಥಿಗಳಿಗೆ ಹಂಚಲ್ಪಟ್ಟಿವೆ. ಈ ಪಠ್ಯಪುಸ್ತಕಗಳಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣ ವಾಗಿಲ್ಲ, ಪಠ್ಯಕ್ರಮಕ್ಕೆ ಅನುಗುಣವಾಗಿಲ್ಲ ಎಂದಾದರೆ, ಕಾಗುಣಿತ, ವ್ಯಾಕರಣ ದೋಷಗಳಿದ್ದಲ್ಲಿ ಅವುಗಳನ್ನು ಪರಿಷ್ಕರಣೆಗೊಳಪಡಿಸಿ ಮುದ್ರಿಸಿ ವಿತರಿಸಬೇಕಾದ ಅಗತ್ಯವಿದೆ.

ಆದರೆ, ಹಿಂದಿನ ಸರ್ಕಾರ, ಬೇರೆ ಪಕ್ಷದ ಸರ್ಕಾರ ಜಾರಿಗೆ ತಂದಿರುವ ಪಠ್ಯಕ್ರಮ, ಪಠ್ಯಪುಸ್ತಕಗಳು ಎಂದು ನೀಲಿಗಣ್ಣಿನಿಂದ ನೋಡಿ, ಪ್ರಾದೇಶಿಕ ಅಸಮಾನತೆ ಇದೆ. ಪಠ್ಯಪುಸ್ತಕಗಳಲ್ಲಿ ಕರಾವಳಿ ಪ್ರದೇಶದ ಸಾಹಿತಿಗಳ ಕೃತಿಗಳಿಂದ ಆಯ್ಕೆಗೊಂಡಿಲ್ಲ, ಹೈದರಾಬಾದ್ ಕರ್ನಾಟಕ ಸಾಹಿತಿಗಳ ಲೇಖನಗಳು ಪಠ್ಯಗಳಲ್ಲಿಲ್ಲ, ಪಠ್ಯಪುಸ್ತಕ ರಚನೆಯಲ್ಲಿ ಮೈಸೂರು ವಿಭಾಗದ ತಜ್ಞರು ಸೇರ್ಪಡೆಗೊಂಡಿಲ್ಲ ಎಂದು ಹೇಳಿಕೊಂಡು ಪಠ್ಯಪುಸ್ತಕ ರಚನೆಯ ಮೂಲ ಆಶಯವನ್ನೇ ಮರೆತು ಪ್ರಾದೇಶಿಕ ಅಸಮಾನತೆ ಹೋಗಲಾಡಿಸುತ್ತೇವೆ ಎಂದು ಮೈಸೂರು ವಿಭಾಗದ ಸಾಹಿತಿಯ ಪಠ್ಯ ತೆಗೆದು ಬೆಂಗಳೂರು ವಿಭಾಗದ ಸಾಹಿತಿಯ ಪಠ್ಯ ಸೇರಿಸುವುದು, ಬೆಳಗಾಂ ವಿಭಾಗದ ಲೇಖಕರ ಪಠ್ಯ ತೆಗೆದು ಧಾರವಾಡದ ಲೇಖಕರ ಲೇಖನ ಸೇರಿಸುವುದು ಹೀಗೆ ಪಠ್ಯಪುಸ್ತಕವನ್ನು ಪರಿಷ್ಕರಣೆ ಮಾಡುವುದು ಅಸಮಂಜಸವಾದ ಕ್ರಮ. ಪಠ್ಯಪುಸ್ತಕಗಳನ್ನು ಶೇಕಡ 10 ರಷ್ಟು, ಶೇಕಡ 20ರಷ್ಟು ಪರಿಷ್ಕರಣೆಯನ್ನು ಬದಲಾಯಿಸಲು ಮುಂದಾಗುವುದು ಸೂಕ್ತಕ್ರಮವಲ್ಲ. ಪಠ್ಯಪುಸ್ತಕಗಳನ್ನು ಭೌತಿಕ ಆಕಾರದ ಮೇಲೆ ಅಥವಾ ಪರಿಮಾಣಾತ್ಮಕವಾಗಿ ನೋಡುವುದು ಅವೈಜ್ಞಾನಿಕ. ಸಾಹಿತಿಗಳು ಪಠ್ಯಪುಸ್ತಕ ಹೀಗಿರಬೇಕೆಂದು ರಚಿಸಿದ ಮೇಲೆ ಬೋಧನೆಯಲ್ಲಿ ಅನುಭವವಿರುವ ರಾಜ್ಯ ಶಿಕ್ಷಣಾಧಿಕಾರಿಗಳು ಪರಿಶೀಲನೆ ಮಾಡುವುದನ್ನು ಆಕ್ಷೇಪಿಸುವುದೂ ಸಹಾ ಸೂಕ್ತವಾದ ಕ್ರಮವಲ್ಲ. ಶಿಕ್ಷಣಾಧಿಕಾರಿಗಳಾಗಿರುವವರು ಕೊಠಡಿ ಬೋಧನೆಗಳಲ್ಲಿ ವಿದ್ಯಾರ್ಥಿಗಳೊಡನೆ ಅನುಸಂಧಾನಿಸಿ ಬೋಧಿಸಿ ಅನುಭವ ಇದ್ದು ಅವರುಗಳು ಪ್ರಸ್ತುತ ಇಲಾಖೆಯ ವಿವಿಧ ಹಂತಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢವಿಭಾಗಗಳಲ್ಲಿ ಕ್ಷೇತ್ರದ ನೇರ ಅನುಭವವಿರುವ ಇವರು ಶಿಕ್ಷಕರಾಗಿಯೇ ಕರ್ತವ್ಯ ನಿರ್ವಹಿಸಿರುವವರು. ವಿಶ್ವವಿದ್ಯಾಲಯ ಹಂತದಲ್ಲಿ ಕರ್ತವ್ಯ ನಿರ್ವಹಿಸಿದ ಪ್ರಾಧ್ಯಾಪಕರುಗಳು ಆಳವಾದ ವಿಷಯಜ್ಞಾನವನ್ನು ಹೊಂದಿರುತ್ತಾರೆಯೇ ವಿನಃ ತಳಹಂತದಲ್ಲಿ ಬೋಧನಾನುಭವ ಹಾಗೂ ಕ್ಷೇತ್ರಾನುಭವ ಕಡಿಮೆ. ಕಲಿಕೆ ಮತ್ತು ಬೋಧನಾಂಶಗಳನ್ನು ಪಠ್ಯಪುಸ್ತಕದಲ್ಲಿ ಸಮತೋಲನವಾಗಿ ಪರಿಗಣಿಸಿ ಕಲಿಕಾ ಪ್ರಾಯೋಗಿಕತೆಯ ಮೂಲಕ ಸಮನ್ವಯ ಗೊಳಿಸಿ ಜ್ಞಾನ ಸಂವರ್ಧನೆಗೆ ಅವಕಾಶ ಕಲ್ಪಿಸಿದ, ಲಿಂಗ ಸಮಾನತೆಯ ಸ್ವಕಲಿಕಾ ಕೌಶಲಾವೃದ್ಧಿಯ ಕಲಿಕೆ, ಆಸಕ್ತಿ ಮತ್ತು ಉಲ್ಲಾಸವನ್ನು ಉದ್ದೀಪನ ಗೊಳಿಸುವ ಉದ್ದೇಶದಿಂದ ರಚಿಸಲಾದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರು ಕರ್ನಾಟಕದ ಖ್ಯಾತನಾಮರೇ ಆಗಿದ್ದಾರೆ. ಅವರ ವಿದ್ವತ್ತು, ಪ್ರೌಢಿಮೆ ಸಾಮಾಜಿಕ ಕಳಕಳಿ ಪ್ರಶ್ನಾತೀತ, ಶೈಕ್ಷಣಿಕ ಸಾರ್ವತ್ರೀಕರಣದ ಸದುದ್ದೇಶದಿಂದ ರೂಪಿಸಲಾದ ಪಠ್ಯಪುಸ್ತಕಗಳ ಬದಲಾವಣೆ ಮಾಡ ಹೊರಟಿರುವುದು ಪೂರ್ವಾಗ್ರಹ ಪೀಡಿತವೇ ಸರಿ.

ಪಠ್ಯಪುಸ್ತಕ ರಚನೆ ವಿದ್ಯಾರ್ಥಿಗಳ ವಯೋಬುದ್ಧಿ ಸಾಮರ್ಥ್ಯಕ್ಕನುಗುಣವಾದ ವಿಷಯಗ್ರಹಣ ಸಲುವಾಗಿ ಮೆದುಳು ಹಾಗೂ ಹೃದಯ ಸಂಬಂಧಿ ಆಗಿರಬೇಕೇ ವಿನಹ ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯರ ಪಾಂಡಿತ್ಯ ಪ್ರದರ್ಶನವಲ್ಲ. ಸನ್ಮಾನ್ಯ ಬರಗೂರುರವರು ಪ್ರತಿಭಟನೆ ಒಂದು ಮೌಲ್ಯವೆಂದು ಬೋಧಿಸಿದವರು, ಕರೆ ನೀಡಿದವರು. ರಾಜ್ಯದ ಉದ್ದಗಲಕ್ಕೂ ಪಠ್ಯಪುಸ್ತಕ ಗೌಪ್ಯ ಪರಿಷ್ಕರಣೆ ವಿರುದ್ಧ ಪ್ರತಿಭಟಿಸುತ್ತಿದ್ದರು. ಪರಿಷ್ಕರಣೆಗೆ ಒತ್ತಾಯ ಹಾಕುತ್ತಿರುವ, ಇಲಾಖಾ ಅಧಿಕಾರಿಗಳ

ಪುಟ 10 ಕ್ಕೆ ➤

ಆದರ್ಶ ಶಿಕ್ಷಕರು

# ಆದರ್ಶ ಶಿಕ್ಷಕರು– ವೆಂಕಣ್ಣಯ್ಯ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

**(ಮುಂದುವರೆದ ಭಾಗ)**

1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾದಾಗ ಅದರ ಪೋಷಣೆಯಲ್ಲಿ ಪ್ರಧಾನಪಾತ್ರ ವಹಿಸಿದವರಲ್ಲಿ ವೆಂಕಣ್ಣಯ್ಯನವರೂ ಒಬ್ಬರು. ಇದಾದ ಒಂದು ತಿಂಗಳಿಗೇ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಪ್ರಾರಂಭವಾಯ್ತು. ವೆಂಕಣ್ಣಯ್ಯನವರು ತಮ್ಮೆರಡು ಕಣ್ಣುಗಳಂತೆ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಸಂಘವನ್ನು ರಕ್ಷಿಸಿಕೊಂಡುಬಂದರು.

ಇರುವೆಗೆ ಬೆಲ್ಲದಂತೆ, ವಿದ್ಯಾರ್ಥಿಗಳ ಪಾಲಿಗೆ ವೆಂಕಣ್ಣಯ್ಯ ನವರು ಸದಾ ಅವರ ಸುತ್ತ ವಿದ್ಯಾರ್ಥಿಗಳ ಪಡೆಯೇ ಇರುತ್ತಿತ್ತು. ಅದೂ ಕಾಲೇಜು ವಿದ್ಯಾರ್ಥಿಗಳು ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿಗಳ ಕಲ್ಪನೆಯ ಕೂಸು 'ಪ್ರಬುದ್ಧ ಕರ್ನಾಟಕ' ಪತ್ರಿಕೆ. ಈ ಪತ್ರಿಕೆಯ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಪ್ರವೇಶ ಪಡೆದವರೆಷ್ಟೋ ಜನ! ಕೃಷ್ಣಶಾಸ್ತ್ರಿಗಳು ಬೆಂಗಳೂರಿಂದ ಮೈಸೂರಿಗೆ ವರ್ಗವಾಗಿ ಹೋದ ನಂತರ ಅದರ ಪ್ರಕಟಣೆಯ ಹೊಣೆ ವೆಂಕಣ್ಣಯ್ಯನವರ ಮೇಲೆಯೇ ಬಿದ್ದಿತು. ಅವರ ಮನೆಯೇ ಪತ್ರಿಕೆಯ ಕಾರ್ಯಾಲಯ. ಪತ್ರಿಕೆಗೆ ಸ್ಟಾಂಪು ಹಚ್ಚುವರ ಒಂದು ತಂಡ. ಅದನ್ನು ಜೋಡಿಸುವವರದ್ದು ಮತ್ತೊಂದು ತಂಡ. ಎಲ್ಲರೂ ಅವರ ಪ್ರೀತಿಯ ವಿದ್ಯಾರ್ಥಿಗಳೇ. ಅವರೆಲ್ಲರ ಊಟೋಪಚಾರಗಳೂ ಅವರ ಮನೆಯಲ್ಲೇ!

## ಪರೋಪಕಾರಾರ್ಥ ಮಿದಂಶರೀರಂ

ವೆಂಕಣ್ಣಯ್ಯ ಬಾಳೆಲ್ಲವನ್ನೂ ಪರೋಪಕಾರಕ್ಕಾಗಿಯೇ ಸವೆಸಿದರು. ಅವರ ಜೀವನದ ಹತ್ತಾರು ಘಟನೆಗಳು ಇದನ್ನು ನಿರೂಪಿಸುತ್ತದೆ. ಅವರಿಂದ ಕಾಲೇಜು ಫೀಸು ಪಡೆದ ವಿದ್ಯಾರ್ಥಿ ಗಳೆಷ್ಟೋ ? ವಾರಾನ್ನ ಉಂಡವರೆಷ್ಟೋ? ಮದುವೆ ಮುಂಜಿ ಎಂದು ಧನಸಹಾಯ ಪಡೆದವರೆಷ್ಟೋ? ವಿ. ಸೀತಾರಾಮಯ್ಯ ನವರು ಕಣ್ಣಾರೆ ಕಂಡ ಒಂದು ಘಟನೆ ಹೀಗಿದೆ. ಅದನ್ನು ಅವರ ಮಾತುಗಳಲ್ಲೇ ಓದಿರಿ. "ದಿನಸಿ ಅಂಗಡಿಗೆ 3 ತಿಂಗಳ ಸಾಲ ಬಾಕಿ ಇತ್ತು. ಬ್ಯಾಂಕಿನಿಂದ ಸಾಲ ಪಡೆದು ತೀರಿಸಲು ಪ್ರಯತ್ನಿಸಿದರು. ಸಾಲ ಸ್ಯಾಂಕ್ಷನ್ ಆಯಿತು. ಹಣ ತರಲು ನಾನು ಅವರೊಂದಿಗೆ ಹೋಗಿದ್ದೆ. ಬ್ಯಾಂಕಿನಿಂದ ಹಣ ಪಡೆದು ಮನೆ ಕಡೆಗೆ ಹೊರಟೆವು. ಹಿಂದಿನಿಂದ ಯಾರೋ ಸರ್ ಎಂದು ಕರೆದರು. ಏನೆಂದು ಪ್ರಶ್ನಿಸಿದೆ. ವೆಂಕಣ್ಣಯ್ಯನವರನ್ನು ಕಾಣಬೇಕಿತ್ತು ಎಂದು ಹೇಳಿದರು. ಈ ಮಾತು ಕಿವಿಗೆ ಬಿದ್ದ ಕೂಡಲೇ ವೆಂಕಣ್ಣಯ್ಯ, ಏನೆಂದು ವಿಚಾರಿಸಿದರು? ಆತ 'ನೋಡಿ ಸಾರ್, ನನ್ನ ತಾಯಿ ತೀರಿಹೋದರು. ಕರ್ಮಾಂತರಕ್ಕೆ ಕಾಸಿಲ್ಲ ನಿಮ್ಮಿಂದ ಸಹಾಯವಾಗಬೇಕೆಂದರು. ಕೂಡಲೇ ನಮ್ಮ ದಾನ ಶೂರ ಬ್ಯಾಂಕಿಂದ ತಂದಿದ್ದ 300 ರೂಗಳನ್ನು ಕವರ್ ಸಮೇತ ಆತನಿಗಿತ್ತು 'ನೋಡಪ್ಪಾ, ಸದ್ಯಕ್ಕೆ ನನ್ನ ಬಳಿ ಇರುವುದು ಇಷ್ಟೇ ಹಣ. ಇನ್ನೂ ಬೇಕಾದರೆ ಆಮೇಲೆ ಬಾ' ಎಂದು ಹೇಳಿದರು.

## ಶಿಷ್ಯಚಿತ್ತಾಪಹಾರಕ

ವೆಂಕಣ್ಣಯ್ಯನವರಿಗೆ ಡಿ.ವಿ.ಜಿ.ಯವರ ವನಸುಮದೊಳೆನ್ನ ಮನವ ವಿಕಸಿಸುವಂತೆ' ಎಂಬ ಕವನ ಅತಿಮೆಚ್ಚು. ತಮ್ಮ ಜೀವನವನ್ನು ಅದರಂತೆ ರೂಪಿಸಿಕೊಂಡವರು. ಅದಕ್ಕಾಗಿ ತಮ್ಮ ಶಿಷ್ಯರ ಏಳಿಗೆಯೇ ತಮ್ಮ ಏಳಿಗೆ ಎಂದು ಭಾವಿಸಿದವರು. ಅಖಂಡ ಶಿಷ್ಯಪರಂಪರೆಯನ್ನೇ ಹುಟ್ಟುಹಾಕಿದರು. ಕುವೆಂಪು, ಎಂ.ವಿ ಸೀತಾರಾಮಯ್ಯ, ಡಿ.ಎಲ್ ನರಸಿಂಹಾಚಾರ್ಯ, ಹೆಚ್.ಎಂ ಶಂಕರನಾರಾಯಣರಾವ್, ತೀನಂಶ್ರೀ ಈ ಎಲ್ಲ ಕನ್ನಡದ ಮೇಧಾವಿಗಳು ಅವರ ಶಿಷ್ಯರೇ. ಏಕಲವ್ಯನಂತೆ ಇನ್ನದೆಷ್ಟು ಶಿಷ್ಯರೋ? ತಮ್ಮ ಶಿಷ್ಯರನ್ನು ಓರ್ವ ಮಾಲಿಯು ಗಿಡವನ್ನು ಪೋಷಿಸುವಂತೆ ಪೋಷಿಸಿ ಬೆಳೆಸಿದರು. ಅವರ ತಪ್ಪು ಒಪ್ಪುಗಳನ್ನು ಪ್ರೀತಿಯಿಂದ ತಿದ್ದಿ ತೀಡಿ ಸುಂದರ ಪ್ರತಿಮೆಯಂತೆ ಕಡೆದು ನಿಲ್ಲಿಸಿದರು.

'ಕುವೆಂಪು' ವೆಂಕಣ್ಣಯ್ಯನವರ ಅತ್ಯಂತ ಪ್ರೀತಿಯ ಶಿಷ್ಯ. ಅಂತೆಯೇ ವೆಂಕಣ್ಣಯ್ಯ ಅವರಿಗೆ ಪರಮ ಪ್ರೀತಿಯ ಗುರು. ಕುವೆಂಪುರವರೇ ಹೇಳುವಂತೆ ಅವರಿಬ್ಬರ ಸಂಬಂಧ ದೈವಿಕವಾದದ್ದು. ಕುವೆಂಪುರವರನ್ನು ಈ ಎತ್ತರಕ್ಕೆ ಬೆಳೆಸಿದ ಶ್ರೇಯಸ್ಸು ಈ ಪರಮಗುರುವಿಗೇ ಸಲ್ಲುತ್ತದೆ. ಅದಕ್ಕೆಂದೇ ಕುವೆಂಪು ತಮ್ಮ ಮೇರುಕೃತಿ 'ಶ್ರೀರಾಮಾಯಣ ದರ್ಶನ'ವನ್ನು ತಮ್ಮ ನೆಚ್ಚಿನ ಗುರುಗಳಿಗೇ ಸಮರ್ಪಿಸಿದ್ದಾರೆ.

ವೆಂಕಣ್ಣಯ್ಯನವರಿಗೆ 'ಲಕ್ಷ್ಮೀ' ಆಸ್ತಿಯನ್ನು ಕರುಣಿಸದಿದ್ದರೂ 'ಸರಸ್ವತಿ' ಮಾತ್ರ ಅಪಾರ ಆಸ್ತಿಯನ್ನು ಕರುಣಿಸಿದ್ದಳು. ಅವರದ್ದು ಅಪಾರ ಶಿಷ್ಯ ಸಂಪತ್ತು ಅವರಿಗೆ ಶಿಷ್ಯಾಭಿಮಾನ ಎಷ್ಟಿತ್ತೆಂದರೆ, ಒಂದೆರಡು ದಿನ ಅವರ ಶಿಷ್ಯರು ಅವರ ಮನೆಗೆ ಹೋಗದಿದ್ದರೆ, ಮಾರನೆಯ ದಿನ ತಾವೇ ಅವರನ್ನು ಹುಡುಕಿಕೊಂಡು ಅವರುಗಳ ಮನೆಗೆ ಹೋಗುತ್ತಿದ್ದರು. ಒಮ್ಮೆ ಯಾವುದೋ ಸಮಿತಿಯ ಸಭೆಗಾಗಿ ಮೈಸೂರಿಂದ, ಬೆಂಗಳೂರಿಗೆ ಹೋಗಬೇಕಾಯ್ತು. ಬೆಂಗಳೂರಲ್ಲಿ ರೈಲಿನಿಂದ ಇಳಿದವರೇ, ಸೀದಾ ಮಲ್ಲೇಶ್ವರದಲ್ಲಿದ್ದ ಶಿಷ್ಯನೊಬ್ಬನ ಮನೆಗೆ ಹೋದರು. ಅದು ಊಟದ ಸಮಯ. ಶಿಷ್ಯನ ಮಡದಿ ಮಕ್ಕಳು ಬೇರೆ ಊರಲ್ಲಿ ಇರಲಿಲ್ಲ. ಶಿಷ್ಯ ಎಂತಹುದೋ ಸ್ವಯಂಪಾಕ ಮಾಡಿಕೊಂಡು ತನ್ನ ಊಟಕ್ಕೆ ಸಿದ್ಧವಾಗುತ್ತಿದ್ದ. ಆ ಶಿಷ್ಯನಿಗೇನೋ ಗುರುಗಳು ಮನೆಗೆ ಬಂದರೆಂದು ಸಂತೋಷವಾದರೂ ತಾನು ಮಾಡಿಕೊಂಡಿದ್ದ

ಪುಟ 10 ಕ್ಕೆ ➤

# ಸುತ್ತೋಲೆ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವೃತ್ತಿ ಶಿಕ್ಷಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.**

**ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ ಇಡಿ 78 ಎಸ್‌ಎಲ್‌ಬಿ 2016 ದಿನಾಂಕ:15.4.2016.**

**2. ನಿರ್ದೇಶಕರು (ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ ಸಿ4(3) ಪ್ರೌವೇ.ತಾ12/2014–15 ದಿನಾಂಕ: 01.08.2016.**

ಮೇಲೆ ಓದಲಾದ ಕ್ರಮಾಂಕ (1) ಸರ್ಕಾರದ ಆದೇಶದಲ್ಲಿ ಸರ್ಕಾರಿ/ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರುಗಳಿಗೆ ಜೂನ್ 2016ರಿಂದ ಜಾರಿಗೆ ಬರುವಂತೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದ್ದು, ಕ್ರಮಾಂಕ (2)ರ ಪ್ರಸ್ತಾವನೆಯಲ್ಲಿ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವೃತ್ತಿ ಶಿಕ್ಷಕರುಗಳಿಗೆ ಈ ಸೌಲಭ್ಯವನ್ನು ವಿಸ್ತರಿಸುವ ಕುರಿತು ನಿರ್ದೇಶಕರು (ಪ್ರೌಢಶಿಕ್ಷಣ) ರವರು ಮಾರ್ಗದರ್ಶನ ಕೋರಿರುವ ಹಾಗೂ ಈ ಸಂಬಂಧ ಸರ್ಕಾರದಲ್ಲಿ ವಿವಿಧ ಸಂಘ ಸಂಸ್ಥೆಗಳಿಂದ ಸ್ವೀಕೃತಗೊಂಡಿರುವ ಮನವಿಗಳನ್ನು ಪರಿಶೀಲಿಸಿ, ಈ ಸೌಲಭ್ಯವನ್ನು ಸರ್ಕಾರಿ/ ಅನುದಾನಿತ ಪ್ರೌಢಶಾಲಾ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವೃತ್ತಿ ಶಿಕ್ಷಕರುಗಳಿಗೂ ವಿಸ್ತರಿಸುವಂತೆ ತೀರ್ಮಾನಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 78 ಎಸ್‌ಎಲ್‌ಬಿ 2016, ಬೆಂಗಳೂರು ದಿನಾಂಕ : 03.03.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ಹಾಗೂ ಸಂಯುಕ್ತ ಪದವಿ ಪೂರ್ವ ಕಾಲೇಜಿನ (ಪ್ರೌಢಶಾಲಾ) ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪಪ್ರಾಂಶುಪಾಲರು, ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ವೃತ್ತಿ ಶಿಕ್ಷಕರುಗಳಿಗೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಡಯಟ್, ಉಪ ನಿರ್ದೇಶಕರ/ಕ್ಷೇತ್ರ ಶಿಕ್ಷಣಾಧಿಕಾರಿ, ಮುಂತಾದ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು/ತತ್ಸಮಾನ ಹಾಗೂ ವಿಷಯ ಶಿಕ್ಷಕರು/ ತತ್ಸಮಾನ ಹುದ್ದೆಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಸೌಲಭ್ಯವನ್ನು ದಿನಾಂಕ: 01–06–2016 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ವಿ.ಟಿ. ರಾಜ್ಯಶ್ರೀ), ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಪ್ರೌಢಶಿಕ್ಷಣ)

---

# ಬೀದರ್‌ನಲ್ಲಿ ಸಂಕಲ್ಪ ದಿನಾಚರಣೆ

ದಿನಾಂಕ 23.1.2017 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೀದರ ಜಿಲ್ಲಾ ಘಟಕ ಹಾಗೂ ಪದವಿ ಪೂರ್ವ ಉಪನ್ಯಾಸಕರ ಸಂಘ ಬೀದರ ಜಿಲ್ಲಾ ಘಟಕದ ಸಂಯುಕ್ತ ಆಶ್ರಯದಲ್ಲಿ ಸ್ವಾಮಿವಿವೇಕಾನಂದ ಹಾಗೂ ಸುಭಾಷಚಂದ್ರ ಬೋಸ್ ಜಯಂತಿ ನಿಮಿತ್ತ 'ಸಂಕಲ್ಪ ದಿನ' ಆಚರಣೆ ವಿಜೃಂಭಣೆಯಿಂದ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಪರಮ ಪೂಜ್ಯ ಜ್ಯೋತಿರ್ಮಯಾನಂದ ಸ್ವಾಮಿಜಿ, ರಾಮಕೃಷ್ಣ ವಿವೇಕಾನಂದ ಆಶ್ರಮ ಬೀದರ ಸಾನಿಧ್ಯ ವಹಿಸಿ ವಿವೇಕಾನಂದರನ್ನು ಕುರಿತು ಮಾತನಾಡಿದರು ಹಾಗೂ ಸುಮಾರು 400 ಶಿಕ್ಷಕರಿಗೆ ಸಂಕಲ್ಪ ಬೋಧಿಸಿದರು. ಇದೇ ವೇಳೆ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಅಮರನಾಥ ಪಾಟೀಲರು ಕಾರ್ಯಕ್ರಮವನ್ನು ಉದ್ಘಾಟಿಸಿ ಶಿಕ್ಷಕರ ಸಂಘಟನೆಗಳು ಈ ತರಹದ, ಸೃಜನಾತ್ಮಕ ಹಾಗೂ ಮಹನೀಯರ ಆದರ್ಶ ಶಿಕ್ಷಕರಿಗೆ ನೀಡುವುದು ಈ ಸಮಯದಲ್ಲಿ ಬಹಳ ಪ್ರಸ್ತುತವಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಡೈರಿ ಹಾಗೂ ಉಪನ್ಯಾಸಕ ಸಂಘದ 2017ರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಬೀದರ ಜಿಲ್ಲಾ ಪ.ಪೂ ಇಲಾಖೆಯ ಉಪನಿರ್ದೇಶಕರಾದ ಶ್ರೀ ಶಿವರಾಜ ಪಾಟೀಲ, ಸಾ.ಶಿ.ಇ ಉಪನಿರ್ದೇಶಕರಾದ ಶ್ರೀ ಶಿವಕುಮಾರ, ವಿಭಾಗ ಪ್ರಮುಖ ಶ್ರೀ ಮಹೇಶ ಬಸರಕೋಡ, ಶ್ರೀ ಶ್ಯಾಮರಾವ ಬಿರಾದರ್, ವಿಠಲದಾಸ ಪ್ಯಾಗೆ, ರಾಜಶೇಖರ ಮಂಗಲಗಿ, ಹಣಮಂತ ನಿರಾಣಿ, ಮೈಲಾರೆ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಅಧ್ಯಕ್ಷರಾದ ಶ್ರೀ ಶಾಂತಕುಮಾರ ಬಿರಾದಾರ ಸ್ವಾಗತಿಸಿದರು ಹಾಗೂ ಶ್ರೀ ಶಿವಕುಮಾರಸಾಲಿ ಕಾರ್ಯವನ್ನು ನಿರೂಪಿಸಿದರು. ಶ್ರೀ ರಾಜಶೇಖರ ಮಂಗಲಗಿ ವಂದಿಸಿದರು. ●


ಕನಸುಗಳು ನನಸಾಗುವ
ಹೊಸ ಭರವಸೆಯ
ಶ್ರೀ ಹೇಮಲಂಬಿ ಸಂವತ್ಸರ
ನಮ್ಮದಾಗಲಿ
ಯುಗಾದಿ ಹಬ್ಬದ ಆತ್ಮೀಯ ಶುಭಹಾರೈಕೆಗಳು
ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ವಿರೋಧಪಕ್ಷದ ಮುಖ್ಯ ಸಚೇತಕರು
ಕರ್ನಾಟಕ ವಿಧಾನ ಪರಿಷತ್ತು
/ ganeshkarnik
ಕೊಠಡಿ ಸಂಖ್ಯೆ: 144, 145, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು – 560001 | 080-22253722, 22033858
ನಿವಾಸ: 204, ಶಾಸಕರ ಭವನ, ಬೆಂಗಳೂರು – 560001 | 080-22359211
ಕ್ಷೇತ್ರ ಕಛೇರಿ: ಜಿಲ್ಲಾಧಿಕಾರಿ ಕಛೇರಿ ಆವರಣ, ಮಂಗಳೂರು – 575001
ಫ್ಯಾಕ್ಸ್: 080-22253722 | ಇ-ಮೇಲ್: captkarnik@gmail.com | ವೆಬ್‌ಸೈಟ್: ganeshkarnik.net

➢ ಪುಟ 3 ರಿಂದ..... ಯುಗಾದಿ...

ಮಾರ್ಮಿಕವಾಗಿ ಉಲಿದಿದ್ದಾರೆ. ವರಕವಿ ದ.ರಾ. ಬೇಂದ್ರೆಯವರು ಯುಗಯುಗಾದಿ ಕಳೆದರೂ, ಯುಗಾದಿ ಮರಳಿ ಬರುತಿದೆ, ಹೊಸ ವರುಷಕೆ ಹೊಸ ಹರುಷವ, ಹೊಸತು ಹೊಸತು ತರುತಿದೆ. ಎನ್ನುತ್ತಾ ಹೊಸ ಸಾಧನೆಗಳಿಗೆ ಸ್ಫೂರ್ತಿಯಾಗಲಿ ದಿನದಿನವೂ ಈ ದಿನ ಎಂದು ಹಾರೈಸಿದರೆ, ಜಿ.ಎಸ್. ಶಿವರುದ್ರಪ್ಪನವರು –ಬಂದ ಚೈತ್ರದ ಹಾದಿ ತೆರದಿದೆ, ಬಣ್ಣ–ಬೆಡಗಿನ ಮೋಡಿಗೆ ಹೊಸತು ವರ್ಷದ ಹೊಸತು ಹರ್ಷದ, ಬೇವು–ಬೆಲ್ಲದ ಬೀಡಿಗೆ ಎಂದು ಹೊಸ ಹುಟ್ಟಿಗೆ, ಹೊಸ ಹರ್ಷದ ಮಾವುಗೆ, ಬೇವು– ಬೆಲ್ಲದ ಜಗತ್ತಿಗೆ ಬಾಳಿನ ಹೊಸತನಕ್ಕೆ ಶುಭ ಕೋರುತ್ತಾರೆ.

ಹೀಗೆ ಭಾರತೀಯ ಧರ್ಮದ ಆಚರಣೆಗಳು ಭಾರತದ ಪ್ರಕೃತಿಯನ್ನವಲಂಬಿಸಿ ಇವೆ. ಇವುಗಳಲ್ಲಿರುವ ಮೌಢ್ಯತೆಯನ್ನು ತೊಲಗಿಸಿ ಅರ್ಥಪೂರ್ಣವಾಗಿ ಆಚರಿಸಿದಾಗ ಹಬ್ಬಗಳ ಕಳೆ ಇನ್ನೂ ಹೆಚ್ಚಾಗಿ ಬಾಳಲ್ಲಿ ಹೊಸತನ ಮೂಡಲು ಸಾಧ್ಯ.

●

**ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ**

**(ಪ್ರಾರೂಪ 8, ವಿಧಿ 8)**

| | |
|---|---|
| ಪ್ರಕಟಣೆಯ ಸ್ಥಳ | : ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು-560020 |
| ಪ್ರಕಾಶಕ | : ಕೃ. ನರಹರಿ ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು-560020 |
| ಮಾಲೀಕತ್ವ | : ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು-560020 |
| ಸಂಪಾದಕ | : ಕೃ. ನರಹರಿ (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು - 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಕೃ. ನರಹರಿ ಘೋಷಿಸುತ್ತೇನೆ.

ಬೆಂಗಳೂರು (ಸಹಿ) ಕೃ. ನರಹರಿ
1.3.2017 ಪ್ರಕಾಶಕ

➢ ಪುಟ 6 ರಿಂದ..... ಬಲಿಪಶುಗಳು.......

ಮೇಲಿನ ಅನಾಧರಣೆ, ಅನುಮಾನ ಏಕೋ ತಿಳಿಯದಾಗಿದೆ. ಬರಗೂರರ ವಿದ್ವತ್‌ಪೂರ್ಣ ಜ್ಞಾನ ಪಾಂಡಿತ್ಯ, ಜನಪ್ರಿಯವೂ ಹೌದು, ಜನಪರವೂ ಹೌದು. ತಾನು, ತನ್ನ ನೇತೃತ್ವದಲ್ಲಿ ನಡೆದ ಪರಿಷ್ಕರಣೆ ಆದ್ದರಿಂದ ಜಾರಿಯಾಗಬೇಕು, ಅನುಷ್ಠಾನಗೊಳ್ಳಬೇಕು ಎಂಬ ಹಠ ಯಾಕೆ? ಯಾವ ಯಾವ ತರಗತಿಯ ಪಠ್ಯಗಳು ಎಲ್ಲಿ, ಏಕೆ ಬದಲಾಯಿಸಬೇಕಾಗಿದೆ ಎಂಬುದನ್ನು ಸಾರ್ವತ್ರಿಕ ಚರ್ಚೆಗೆ ಬಿಟ್ಟು ಕೊಠಡಿಗಳಲ್ಲಿ ಬೋಧಿಸುವ ಶಿಕ್ಷಕರ, ಶಿಕ್ಷಣ ತಜ್ಞರ, ಜನಪ್ರತಿನಿಧಿಗಳ ಶಿಕ್ಷಣಾಸಕ್ತರ ಅಭಿಪ್ರಾಯಗಳನ್ನು ತೆಗೆದುಕೊಂಡು ಒಂದರಿಂದ ಹತ್ತನೇ ತರಗತಿಯವರೆಗೆ ಕಲಿಕಾ ವಿಷಯಗಳು ಸಹ ಸಂಬಂಧ ನಿಕಟತವಾಗಿ ವಿಸ್ತೃತವಾಗಿ ವಿಸ್ತಾರಗೊಳಿಸಲ್ಪಟ್ಟಿದೆಯೇ ಎಂದು ಪರಿಶೀಲಿಸಿ ಅಗತ್ಯವಿದ್ದಲ್ಲಿ ಸೇರ್ಪಡೆಗೊಳಿಸುವ, ತೆಗೆದುಹಾಕುವ ಕಾರ್ಯಕ್ಕೆ ಮುಂದಾಗಬೇಕು. ಪಠ್ಯಪುಸ್ತಕಗಳನ್ನು ಮುದ್ರಿಸಿ ವಿತರಿಸುವ ಸಮಯ ಹತ್ತಿರ ಬಂದಿದ್ದಾಗ್ಯೂ ಇನ್ನೂ ಇದರ ಬಗ್ಗೆ ಚರ್ಚಿಸುತ್ತಿರುವುದು ಸಾದುವಲ್ಲ. ಇದು ವಿದ್ಯಾರ್ಥಿಗಳನ್ನು ಹಾಗೂ ಶಿಕ್ಷಕರನ್ನು ಬಲಿಪಶು ಮಾಡಿದಂತಾಗುತ್ತದೆ.

●

➢ ಪುಟ 7 ರಿಂದ..... ಆದರ್ಶ ಶಿಕ್ಷಕರು– ವೆಂಕಣ್ಣಯ್ಯ...

ಸಾಮಾನ್ಯ ಅಡಿಗೆಯನ್ನು ಬಡಿಸುವುದು ಹೇಗೆಂಬ ಸಂಕೋಚ. ಗುರುಗಳು ಅವನ ಗಲಿಬಿಲಿಯನ್ನು ಅರ್ಥಮಾಡಿಕೊಂಡರು. ಮುಗುಳ್ನಗುತ್ತ 'ಅಯ್ಯಾ ಶಿಷ್ಯ, ನೀನೇನು ಊಟಮಾಡುತ್ತೀಯೋ ಅದನ್ನೇ ನನಗೂ ಬಡಿಸು' ಎಂದು ಹೇಳುತ್ತಾ ತಾವೇ ಒಂದು ಎಲೆಯನ್ನು ಹಾಕಿಕೊಂಡು ಊಟಕ್ಕೆ ಕುಳಿತೇ ಬಿಟ್ಟರು. ಇಂತಹ ವಾತ್ಸಲ್ಯ, ಸರಳತೆ, ಸಲಿಗೆ ಇದೆಲ್ಲಕ್ಕೂ ಮಿಗಿಲಾಗಿ ಆ ಹೃದಯವಂತಿಕೆ ಬೇರೆ ಯಾರಲ್ಲಾದರೂ ಕಾಣಲು ಸಾಧ್ಯವೇ?

ಎಸ್.ವಿ ಪರಮೇಶ್ವರಭಟ್ಟರು, ವೆಂಕಣ್ಣಯ್ಯನವರಿಗೆ ಎಂ.ಎ ತರಗತಿಯ ಏಕಮಾತ್ರ ವಿದ್ಯಾರ್ಥಿ. ಅವರು ತಮ್ಮ ಅನುಭವವನ್ನು ದಾಖಲಿಸುತ್ತಾ 'ವೆಂಕಣ್ಣಯ್ಯನವರು ತರಗತಿಗೆ ಬಂದೊಡನೆ ತಮ್ಮ ಕಷ್ಟ ನಿಷ್ಠುರಗಳನ್ನು ಮರೆತು ವಿದ್ಯಾರ್ಥಿಯ ಯೋಗಕ್ಷೇಮ ವಿಚಾರಿಸುತ್ತಿದ್ದರು. ಕಾಲೇಜಿನ ಆಳನ್ನು ಕರೆದು ಅವನಿಂದ ತಿಂಡಿ–ಕಾಫಿ ತರಿಸಿ ವಿದ್ಯಾರ್ಥಿಯ ಜೀವವನ್ನು ತಂಪುಮಾಡಿದ ನಂತರವೇ ಪಾಠ ಮಾಡುತ್ತಿದ್ದುದು. ನಾನು ವಿದ್ಯಾರ್ಥಿಯಾಗಿದ್ದಾಗ ಅವರು ನೀಡಿದ ಸಲಹೆ, ಸಹಕಾರ, ಪ್ರೋತ್ಸಾಹಗಳ ಫಲವಾಗಿಯೇ ನಾನು ಓರ್ವ ಕವಿ ಎಂದು ಹೆಸರು ಪಡೆಯಲು ಸಾಧ್ಯವಾಯಿತು.

ವಿದ್ಯಾರ್ಥಿಗಳು ತಮ್ಮ ಸುಖದುಃಖವನ್ನು ನಿರ್ಭಯವಾಗಿ ಅವರಲ್ಲಿ ನಿವೇದಿಸಿಕೊಳ್ಳುತ್ತಿದ್ದರು. ಅವರು, ವಿದ್ಯಾರ್ಥಿಗಳಿಗೆ ಎಲ್ಲ ಬಗೆಯ ಸಹಾಯವನ್ನೂ ಮಾಡುತ್ತಿದ್ದರು. ಹೆಚ್ಚೇನು? ವಿದ್ಯಾರ್ಥಿಗಳೆಂದರೆ ಅವರಿಗೆ ತಮ್ಮ ಮಕ್ಕಳಿಗಿಂತ ಹೆಚ್ಚು.

ಟಿ.ಎಸ್ ವೆಂಕಣ್ಣಯ್ಯನವರು ತೆಂಗಿನ ಮರದಂತೆ ಎತ್ತರದ ಆಳು. ಅವರ ವ್ಯಕ್ತಿತ್ವವೂ ಅದರಂತೆಯೇ ಕಲ್ಪವೃಕ್ಷ. ಅವರ ಬಗ್ಗೆ ತಿಳಿದಷ್ಟೂ, ಓದಿದಷ್ಟೂ, ಇಂಥ ಓರ್ವವ್ಯಕ್ತಿ ಇದ್ದರೇ? ಓರ್ವ ಶಿಕ್ಷಕ ಹೀಗೂ ಇರಬಹುದೇ ಎಂದೆನ್ನಿಸುತ್ತದೆ. ಎಲ್ಲೋ ಮನಸ್ಸಿನ ಒಂದು ಮೂಲೆಯಲ್ಲಿ ನಾವೂ ಅವರಂತಾಗಬಲ್ಲೆವೇ? ಎಂಬ ಭಾವ ಮೊಳೆಯುತ್ತದೆ.

●

# ಸಾಮಾಜಿಕ ಕಾರ್ಯಕ್ಕೆ ಮೇಲ್ಪಂಕ್ತಿ ಶ್ರೀ ಜಯದೇವ್



ಈ ಭೂಮಿಯ ಮೇಲೆ ಹುಟ್ಟಿದ ವ್ಯಕ್ತಿಯೊಬ್ಬ ಸಾರ್ಥಕ ಜೀವನ ನಡೆಸಿದ್ದಾನೆ ಎನ್ನುವುದಕ್ಕೆ ಸಾಕ್ಷಿ ಏನು? ಎಂದರೆ "ಆ ವ್ಯಕ್ತಿಯನ್ನು ಸಮಾಧಿ ಮಾಡಲು ಸ್ಮಶಾನದಲ್ಲಿ ಹಳ್ಳ ತೆಗೆಯುತ್ತಾನಲ್ಲ, ಆ ಸಾಮಾನ್ಯ ಕೂಲಿಯ ಕಣ್ಣಿನಲ್ಲೂ ಎರಡು ತೊಟ್ಟು ಕಣ್ಣೀರು ಹರಿಯಬೇಕು" ಎಂದು ಪಾಶ್ಚಾತ್ಯ ಚಿಂತಕನೊಬ್ಬ ಹೇಳಿದ್ದಾನೆ. ಈ ಇಂಥ ವ್ಯಕ್ತಿಗಳ ಅಗಲಿಕೆಯ ನೋವನ್ನು ಸಾವಿರಾರು ಜನ ಅನುಭಿಸುತ್ತಾರೆ. ಸಮಾಜದಲ್ಲಿ ಲಕ್ಷಕ್ಕೊಬ್ಬರು ಇಂಥ ವ್ಯಕ್ತಿಗಳು ಹುಟ್ಟುತ್ತಾರೆ. ತಮ್ಮಂತೆ ಬಾಳಬೇಕೆಂಬ ಮೇಲ್ಪಂಕ್ತಿಯನ್ನು ಹಾಕಿಕೊಡುತ್ತಾರೆ.

ಈ ರೀತಿ ಲಕ್ಷಕ್ಕೊಬ್ಬರಲ್ಲಿ ಹುಟ್ಟಿದವರು ಇದೇ ಫೆಬ್ರವರಿ 20 ರಂದು ಬೆಂಗಳೂರಿನಲ್ಲಿ ಕೈಲಾಸವಾಸಿಗಳಾದ ಆರ್‌ಎಸ್‌ಎಸ್‌ನ ಹಿರಿಯ ಪ್ರಚಾರಕ ಶ್ರೀ ಜಯದೇವ್.

1932ರ ಫೆಬ್ರವರಿ 18 ರಂದು ಮೈಸೂರಿನಲ್ಲಿ ಜನಿಸಿದ ಜಯದೇವ್ ಕಿಶೋರಾವಸ್ಥೆಯಲ್ಲೇ ಆರ್‌ಎಸ್‌ಎಸ್‌ನ ರಾಷ್ಟ್ರೀಯ ವಿಚಾರಧಾರೆಯತ್ತ ಆಕರ್ಷಿತರಾಗಿ ತಮ್ಮ ಬಿಎಸ್ಸಿ, ಬಿ.ಎಲ್ ಪದವಿಯ ನಂತರ ಸಂನ್ಯಾಸ ಬದುಕನ್ನು ಸ್ವೀಕರಿಸಿ ತಮ್ಮ ಬಾಳಿನ 65 ವರ್ಷಗಳನ್ನು ಸಮಾಜ ಸೇವೆಗೆ ಮುಡಿಪಿಟ್ಟರು.

ಜೀವನವನ್ನು ಸಮಾಜಸೇವೆಗೆ ಮುಡಿಪಿಡುವುದೆಂದರೆ ಅಸೀಧಾರ ವ್ರತವನ್ನು ಸ್ವೀಕರಿಸಿದಂತೆ 'ತನಗಾಗಿ ಸ್ವಲ್ಪ ಸಮಾಜಕ್ಕಾಗಿ ಸರ್ವಸ್ವ' ಎಂದೇ ಬಾಳಬೇಕು. ಜಯದೇವ್ 65 ವರ್ಷ ಹೀಗೇ ಬಾಳಿದರು.

ಇಂದು ಸಮಾಜಸೇವೆ ಎನ್ನುವುದು ಕೋಟ್ಯಾಂತರ ರೂಪಾಯಿ ಗಳಿಕೆಯ ವೃತ್ತಿಯಾಗಿದೆ. ರಾಜಕೀಯ ಏಣಿಯ ಮೊದಲ ಮೆಟ್ಟಲಾಗಿದೆ. ಆದರೆ ಜಯದೇವ್ ಹಣ, ಆಸ್ತಿ, ಪಾಸ್ತಿ, ಪ್ರಸಿದ್ಧಿ, ಕೀರ್ತಿ ಎಂಬ ಎಲ್ಲ ಕಾಮನೆಗಳಿಗೆ ಬೆನ್ನು ಮಾಡಿಹೊರಟರು. ಸಮಾಜದಲ್ಲಿ ಉತ್ತಮ ವ್ಯಕ್ತಿಗಳ ನಿರ್ಮಾಣ ಮಾಡಬೇಕು. ಅವರು ಪ್ರಖರ ರಾಷ್ಟ್ರಭಕ್ತರಾಗಿ ಸಮಾಜದ ಸರ್ವಸಾಮಾನ್ಯನ ಜೀವನವನ್ನು ಹಸನುಮಾಡುವ ಸಂಕಲ್ಪಮಾಡಿ ಅದಕ್ಕೆ ತಕ್ಕಂತೆ ಜೀವನ ನಡೆಸಬೇಕು ಎಂಬ ಆಶಯವನ್ನು ಹೊತ್ತು ಅದಕ್ಕಾಗಿ ಶ್ರಮಿಸಿದರು. 1965ರಲ್ಲಿ 'ರಾಷ್ಟ್ರೋತ್ಥಾನ ಪರಿಷತ್' ಎಂಬ ಸಂಸ್ಥೆಗೆ ಹೆಗಲು ಕೊಟ್ಟು 30 ವರ್ಷಗಳ ಕಾಲ ಶಿಕ್ಷಣ, ಆರೋಗ್ಯ ಮತ್ತು ಸಾಹಿತ್ಯ ಸೇವೆಯ ಮೂಲಕ ಜನಜಾಗೃತಿಯನ್ನು ಮಾಡಿದರು. ಇಷ್ಟು ದೊಡ್ಡ ಸಂಸ್ಥೆಯನ್ನು ನಡೆಸುತ್ತಿದ್ದರೂ ಅವರದ್ದು ಅತ್ಯಂತ ಸರಳ ಜೀವನ. ಅವರ ಆಸ್ತಿಯೆಂದರೆ ಅವರ ಕೋಣೆಯ ಗೂಟಕ್ಕೆ ನೇತುಹಾಕಿದ್ದ ಎರಡು ಪ್ಯಾಂಟು, ಎರಡು ಷರಟು ಒಂದು ಜತೆ ಪಂಚೆ, ಸಂಘದ ಚಡ್ಡಿ, ಮಲಗಲು ಒಂದು ಚಾಪೆ, ದಿಂಬು, ಒಂದು ಹೊದಿಕೆ. ಹತ್ತಾರು ಪುಸ್ತಕಗಳು, ಅವರ ಆರಾಧ್ಯದೈವ ಶಿವನ ಪಿಂಗಾಣಿ ಮೂರ್ತಿ.

ಅವರ ವ್ಯಕ್ತಿತ್ವ ಅಯಸ್ಕಾಂತದಂತೆ. ನೂರಾರು ಜನ ವಿವಿಧ ಸಮಸ್ಯೆಗಳನ್ನು ಹೊತ್ತು ಅವರ ಬಳಿ ಬರುತ್ತಿದ್ದರು. ಅವರ ಬಿಡುವಿಲ್ಲದ ಚಟುವಟಿಕೆಗಳ ನಡುವೆ ಇಂಥವರೆಲ್ಲರ ಸಮಸ್ಯೆಗಳನ್ನು ಆಲಿಸುವ, ಅದಕ್ಕೆ ಪರಿಹಾರ ಸೂಚಿಸುವುದಕ್ಕೆ ಸಮಯವೆಲ್ಲಿದೆ ಎಂದು ಅನ್ನಿಸಿದರೂ, ಸಮಯವನ್ನು ಹೊಂದಿಸಿಕೊಳ್ಳುವ ಅಪರೂಪ ಕೌಶಲ್ಯ ಅವರಲ್ಲಿತ್ತು. ಸಮಯದ ಹೊಂದಾಣಿಕೆ ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಅವರು ಕಾರ್ಯಕರ್ತರಿಗೆ ತೋರಿಸಿಕೊಟ್ಟದ್ದು ಹೀಗೆ. 'ಓರ್ವ ಕಾರ್ಯಕರ್ತ ಸ್ನಾನ ಮಾಡಲು 45 ನಿಮಿಷ ತೆಗೆದುಕೊಳ್ಳುತ್ತಿದ್ದ. ಜಯದೇವ್ ಅವನನ್ನು ಸ್ನಾನ ಮನೆಗೆ ಕರೆದೊಯ್ದು 5–6 ನಿಮಿಷಗಳಲ್ಲಿ ಸ್ನಾನ ಮುಗಿಸುವುದು ಹೇಗೆಂಬುದನ್ನು ಪ್ರತ್ಯಕ್ಷ ಮಾಡಿ ತೋರಿಸಿದರು. ಇಂಥವರನ್ನು ಕಂಡೇ ಕವಿಯೊಬ್ಬ 'ನುಡಿದಂತೆ ನಡೆವವರ ಅಡಿಗೆನ್ನ ನಮನ' ಎಂದು ಹಾಡಿದ್ದು.

ಪ್ರತಿಯೊಂದು ವಿಷಯವನ್ನು ಆಳವಾಗಿ ಅಧ್ಯಯನ ಮಾಡುವುದು ಅವರ ಸಹಜ ಸ್ವಭಾವ. ಶಿಕ್ಷಣ, ಶಿಕ್ಷಕರ ಬಗ್ಗೆ ಅವರ ಅಪಾರ ಆಸಕ್ತಿ. ರಾಷ್ಟ್ರ ಪುನರ್ನಿರ್ಮಾಣದ ಅತಿಹೆಚ್ಚಿನ ಹೊರೆ ಶಿಕ್ಷಕರ ಮೇಲಿದೆ. ಶಿಕ್ಷಕರು ವೃತ್ತಿಯಿಂದಲ್ಲ ಪ್ರವೃತ್ತಿಯಿಂದ ಶಿಕ್ಷಕರಾಗಬೇಕು ಎನ್ನುವುದಕ್ಕೆ ಅವರ ಕಾಲೇಜು ಶಿಕ್ಷಕರ ಉದಾಹರಣೆಯನ್ನು ನನ್ನೊಂದಿಗೆ ಹಂಚಿಕೊಂಡಿದ್ದರು.

2012 ರ ಮೇ 20ರಿಂದ 23ರ ವರೆಗೆ ಬೆಂಗಳೂರಿನ ಬಳಿಯ ಪಿರಮಿಡ್ ವ್ಯಾಲಿಯಲ್ಲಿ ನಡೆದ ಶಿಕ್ಷಕರ ಪ್ರಶಿಕ್ಷಣ ವರ್ಗದಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದ ಜಯದೇವ್ ಅವರು ಶಿಕ್ಷಕರನ್ನು ಕುರಿತು "ಭಾವೀ ಜನಾಂಗವನ್ನು ರೂಪಿಸುವ ಅತಿದೊಡ್ಡ ಹೊಣೆಗಾರಿಕೆ ನಿಮ್ಮದಾಗಿದೆ. ಶಿಕ್ಷಕ ವೃತ್ತಿ ಎಂದರೆ ಹತ್ತರಲ್ಲಿ ಹನ್ನೊಂದಲ್ಲ. ಅದಕ್ಕೆ ವಿಶೇಷ ಮಹತ್ವವಿದೆ. ಈ ದೇಶದಲ್ಲಿ ಆದರ್ಶ ಶಿಕ್ಷಕರ ಒಂದು ದೊಡ್ಡ ಪರಂಪರೆಯೇ ಆಗಿಹೋಗಿದೆ. ಅಂಥವರ ಸಾಲಿನಲ್ಲಿ ನಮ್ಮದೂ ಹೆಸರಿರಬೇಕು. ಅಂಥ ಜೀವನವನ್ನು ನಡೆಸೋಣ. ಕೇವಲ ಸಂಬಳ ಭತ್ಯೆ ಎಂಬುದೇ ನಮ್ಮ ಜೀವನದ ಗುರಿ ಆಗುವುದು ಬೇಡ. ಹತ್ತಾರು ವರ್ಷಗಳ ನಂತರ ಇಂಥವರು ನಮ್ಮ ಮೇಷ್ಟ್ರಾಗಿದ್ದರು ಎಂದು ನೆನಪಿಸಿಕೊಳ್ಳುವ ನೂರಾರು ವಿದ್ಯಾರ್ಥಿಗಳನ್ನು ನಮ್ಮ ಮೇಲ್ಪಂಕ್ತಿಯಿಂದ ನಿರ್ಮಾಣ ಮಾಡಿದರೆ ನಾವು ಶಿಕ್ಷಕರಾಗಿದ್ದೂ ಸಾರ್ಥಕವಾದೀತು" ಎಂದು ಹೇಳಿದ್ದು ಇಂದಿಗೂ ನನ್ನ ಕಿವಿಯಲ್ಲಿ ಗುಯ್‌ಗುಡುತ್ತಿದೆ.

ಶ್ರೀ ಜಯದೇವರು ಇಂದು ನಮ್ಮೊಂದಿಗಿಲ್ಲ. ಆದರೆ ಅವರು ಅಂದು ಹೇಳಿದ ಈ ಮೇಲಿನ ಮಾತುಗಳು ಎಲ್ಲ ಶಿಕ್ಷಕರಿಗೂ ಎಲ್ಲ ಕಾಲಕ್ಕೂ ಸಲ್ಲುವಂತದ್ದು.



**ಹೆಚ್. ನಾಗಭೂಷಣ ರಾವ್**
ನಿವೃತ್ತ ಅಧ್ಯಾಪಕ
ನ್ಯಾಷನಲ್ ಹೈಸ್ಕೂಲ್
ಬೆಂಗಳೂರು

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-03-2017 Date of Posting 20th or 21st of every month

# ಚಿತ್ರ ಸುದ್ದಿಗಳು



ವೇತನ ತಾರತಮ್ಯ ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ ತಿದ್ದುಪಡಿ ವಿಧೇಯಕ ಕರಾಳ ಶಾಸನವನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ವಿರೋಧಿಸಿರುವ ಹಿನ್ನೆಲೆಯಲ್ಲಿ ಹುಬ್ಬಳ್ಳಿ ವಿಜಯನಗರ ಪದವಿಪೂರ್ವ ಮಹಾವಿದ್ಯಾಲಯದ ಪರೀಕ್ಷಾ ಕೇಂದ್ರದಲ್ಲಿ ಪ್ರಾಚಾರ್ಯರು, ಉಪನ್ಯಾಸಕರು ದ್ವಿತೀಯ ಪಿಯುಸಿ ಪರೀಕ್ಷಾ ಕಾರ್ಯದಲ್ಲಿ ಕಪ್ಪು ಪಟ್ಟಿ ಧರಿಸಿ ಭಾಗಿಯಾದರು.





ಕಲಬುರ್ಗಿಯ ಜ್ಞಾನ ಸಿಂಚನಾ ಕಾಲೇಜಿನಲ್ಲಿ ಶಿಕ್ಷಣ ಇಲಾಖೆ ವೇತನ ಬಟವಾಡೆ ಅಧಿಕಾರಿಗಳಿಗಾಗಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಒಂದು ದಿನದ ಹೆಚ್.ಆರ್.ಎಂ.ಎಸ್ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ವಿಕಲಚೇತನ ನರ್ಸಿಂಗ್ ವಿದ್ಯಾರ್ಥಿನಿ ನಾಗಮ್ಮ ಪರಮಣ್ಣ ಅವರಿಗೆ ಸಂಘದ ಸಹಾಯಾರ್ಥ 40 ಸಾವಿರ ರೂ. ಚೆಕ್ ನೀಡಲಾಯಿತು.



ಅಫ್ಜಲ್‌ಪುರದಲ್ಲಿ ಸಂಘದ ವತಿಯಿಂದ ಸಂಕಲ್ಪ ದಿನಾಚರಣೆ





ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಜಿಲ್ಲಾ ಘಟಕ ಮಂಡ್ಯದ ವತಿಯಿಂದ ಸ್ವಾಮಿ ವಿವೇಕಾನಂದ ಮತ್ತು ಸುಭಾಷ್ ಚಂದ್ರ ಬೋಸ್ ಜಯಂತಿ ನಿಮಿತ್ತ ಸಂಕಲ್ಪ ದಿನಾಚರಣೆ ಏರ್ಪಡಿಸಲಾಗಿತ್ತು.



ಬೀದರ್ ಜಿಲ್ಲೆಯ ಸಂಕಲ್ಪ ದಿನಾಚರಣೆ ಚಿತ್ರದಲ್ಲಿ ಅಮರನಾಥ್ ಪಾಟೀಲ್, ವಿಠಲದಾಸ ಪ್ಯಾಗೆ, ಶ್ಯಾಮರಾವ್ ಬಿರಾದಾರ, ಮಹೇಶ ಬಸರಕೋಡ, ಶಾಂತಕಮಾರ ಬಿರಾದಾರ್



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಮಂಡ್ಯ ಜಿಲ್ಲೆಯು ಕನ್ನಡ ಭಾಷಾ ಶಿಕ್ಷಕರಿಗಾಗಿ ನಡೆಸಿದ ಕಾರ್ಯಾಗಾರದಲ್ಲಿ ಅತಿಥಿಗಳು ಜ್ಯೋತಿ ಬೆಳಗುತ್ತಿರುವುದು.

## ಗಮನಿಸಿ

ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ

**akss1950@gmail.com**

ಇ–ಮೇಲ್‌ಗೆ ಕಳುಹಿಸಿಕೊಡಿ

IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 080-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com